ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 50

೧೨ ಅಕ್ಟೋಬರ್ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

★

ರಾಜ್ಯದ ಆಹಾರ ಸಮಸ್ಯೆ ಚರ್ಚಿಸಲು ಸರ್ವಪಕ್ಷ ಸಮ್ಮೇಳನ ಕೂಡಲೇ ನಡೆಯಲಿ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿಯ ಸಭೆಯು ಇದೇ ತಿಂಗಳ ತಾ. 3 ಮತ್ತು 4 ರಂದು ಸೇರಿ ಪ್ರಾಂತದ ಸದ್ಯದ ಪರಿಸ್ಥಿತಿಯನ್ನು ಚರ್ಚಿಸಿ ಕೆಲವು ತೀರ್ಮಾನಗಳನ್ನು ಇಲ್ಲಿ ಕೊಡಲಾಗಿದೆ.

ಆಹಾರ ಸಮಸ್ಯೆಯ ಬಗ್ಗೆ ಸರ್ವಪಕ್ಷ ಸಮ್ಮೇಳನಕ್ಕೆ ಕರೆ

ಮೈಸೂರು ರಾಜ್ಯದಲ್ಲಿ ಆಹಾರ ಧಾನ್ಯಗಳ ಮತ್ತಿತರ ಜೀವನಾವಶ್ಯಕ ವಸ್ತುಗಳ

● ಅದರಲ್ಲಿ ತಿನ್ನಲು ಯೋಗ್ಯವಾದ ಒಳ್ಳೆಯ ಆಹಾರ ಧಾನ್ಯಗಳನ್ನೂ, ಇತರ ಉಪಯೋಗ ವಸ್ತುಗಳನ್ನೂ ಒದಗಿಸಬೇಕು ;

● ರೂಪಾಯಿಗೆ 2½ ಸೇರಿನಂತೆ ಒಳ್ಳೆ ಅಕ್ಕಿಯನ್ನು ಮಾರಬೇಕು ;

● ದಾಸ್ತಾನುಗಾರರಿಂದ ಧಾನ್ಯಗಳನ್ನು ಸರಕಾರ ವಶಪಡಿಸಿಕೊಂಡು ಅಗ್ಗದರದಲ್ಲಿ ಮಾರಬೇಕು ;

● ಕೇಂದ್ರ ಸರಕಾರದ ಧೋರಣೆಗನುಗುಣವಾಗಿ ನಮ್ಮ ರಾಜ್ಯ ಸರಕಾರ

ಭೂಮಿ ಹಂಚುವಿಕೆ

ನಮ್ಮ ರಾಜ್ಯದಲ್ಲಿರುವ ಸುಮಾರು 10 ಲಕ್ಷ ಎಕರೆ ಬಂಜರು ಜಮೀನನ್ನು ರೈತರಿಗೆ ಹಂಚಲು ಸರಕಾರ ಮಾಡಿರುವ ನಿರ್ಧಾರವನ್ನು ಕಮ್ಯೂನಿಸ್ಟ್ ಪಾರ್ಟಿಯು ಸ್ವಾಗತಿಸುತ್ತದೆ. ಆದರೆ ಇದು ಜಮೀನು ಸಾಕಷ್ಟು ಇರುವ ಭೂಮಾಲಿಕರ ಕೈಗೆ ಸೇರದೆ ಭೂರಹಿತ ರೈತರಿಗೂ ಕಡಿಮೆ ಭೂಮಿ ಇರುವವರಿಗೂ ಸಿಗುವಂತೆ ಎಚ್ಚರಿಕೆ ವಹಿಸಬೇಕೆಂದು ಸರಕಾರವನ್ನು ಒತ್ತಾಯಪಡಿಸುತ್ತದೆ. ಜಮೀನು ಹಂಚುವಾಗ ಎಲ್ಲ ಅರ್ಜಿಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ಸ್ಥಳೀಯ ಜನತೆಯ ಅಭಿಪ್ರಾಯವನ್ನು ಸಹ ಪಡೆಯುವುದಗತ್ಯ. ಜಮೀನ್ದಾರರು ಅಕ್ರಮವಾಗಿ ವಶಪಡಿಸಿಕೊಂಡಿರುವ ಜಮೀನುಗಳನ್ನು ಸರಕಾರ ತೆಗೆದುಕೊಳ್ಳುವುದಲ್ಲದೆ, ಜಮೀನನ್ನು ಉಚಿತವಾಗಿ ಬಡವರಿಗೆ ಹಂಚಬೇಕು.

"ರಾಜಕೀಯ ಸಂತ್ರಸ್ತ"ರಿಗೆ ಜಮೀನು ಕೊಡಬೇಕೆಂಬ ನೀತಿಯನ್ನು ಕಮ್ಯೂನಿಸ್ಟ್ ಪಾರ್ಟಿ ವಿರೋಧಿಸುತ್ತದೆ. ಆಳುವ ಪಕ್ಷ ತನ್ನ ಬೆಂಬಲಿಗರಿಗೆ ಅನುಕೂಲ ಮಾಡಿಕೊಡಲು ಇದು ಸಹಾಯಕವಾಗಿದೆ. ಇದರಿಂದ ಸ್ವಜನ ಪಕ್ಷಪಾತಕ್ಕೆ ಪ್ರೋತ್ಸಾ

(ಕೊನೇ ಪುಟ ನೋಡಿ)

ಶರಾವತಿ ಯೋಜನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಡಲಿ

ಕರ್ನಾಟಕ ಪ್ರಾಂತ ಸಮಿತಿಯ ಕರೆ

ಬೆಲೆಗಳು ಮಿತಿಮೀರಿ ಏರಿರುವುದರ ಬಗ್ಗೆ ಪ್ರಾಂತ ಸಮಿತಿಯು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಬಿಜಾಪುರ ಮುಂತಾದ ಕಡೆಗಳಲ್ಲಿ ಶೇಕಡ 100 ರಷ್ಟು ಬೆಲೆಗಳು ಏರಿವೆಯೆಂದು ವರದಿ ಬಂದಿದೆ. ಇತರ ಭಾಗಗಳಲ್ಲೂ ಬೆಲೆಗಳು ಅಧಿಕ ಪ್ರಮಾಣದಲ್ಲಿ ಏರಿವೆ. ಇದರಿಂದ ಕಾರ್ಮಿಕರಿಗೂ, ರೈತರಿಗೂ ಮತ್ತು ಮಧ್ಯಮ ವರ್ಗದವರಿಗೂ ಜೀವನ ನಡೆಸಲು ಬಹಳ ಕಷ್ಟವಾಗಿದೆ.

ನಮ್ಮ ರಾಜ್ಯದಲ್ಲಿ ಆಹಾರ ಪರಿಸ್ಥಿತಿಯು ಅಷ್ಟು ಗಂಭೀರವಾಗಿಲ್ಲವೆಂದು ಹೇಳಿ ಮೈಸೂರು ಸರಕಾರವೂ, ಆಹಾರ ಮಂತ್ರಿಗಳೂ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು 'ಕಣ್ಣು ಮುಚ್ಚಾಲೆ' ಆಟ ನಡೆಸಲು ಯತ್ನಿಸಿದ್ದಾರೆ. ಇದರಿಂದ ಬೆಲೆ ಏರಿಕೆಗೆ ಇನ್ನು ಹೆಚ್ಚು ಸಹಾಯ ಮಾಡಿದಂತಾಗಿದೆ. ದಾಸ್ತಾನುಗಾರರಿಗೂ, ದೊಡ್ಡ ವ್ಯಾಪಾರಸ್ಥರಿಗೂ ಜನತೆಯ ಶೋಷಣೆಯನ್ನು ಹೆಚ್ಚಿಸಲು ಪ್ರೋತ್ಸಾಹ ಕೊಟ್ಟಂತಾಗಿದೆ. ಕೆಲವೇ ಅಗ್ಗದರದ ಅಂಗಡಿಗಳನ್ನು ತೆರೆದಿರುವುದರಿಂದ ಬೆಲೆ ಏರಿಕೆಯನ್ನು ತಡೆಯಲು ಸರಕಾರ ವಿಫಲವಾಗಿದೆ. ಇದರ ಬಗ್ಗೆ ಸರಕಾರ ಕೂಡಲೇ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ಒತ್ತಾಯಪಡಿಸುತ್ತದೆ :

● ಹೆಚ್ಚು ಸಂಖ್ಯೆಯಲ್ಲಿ ಎಲ್ಲ ಕಡೆಗಳಲ್ಲೂ ನ್ಯಾಯ ದರದ ಅಂಗಡಿಗಳನ್ನು ತೆರೆಯಬೇಕು ;

ವೂ ಆಹಾರ ಸಮಸ್ಯೆಯನ್ನು ಚರ್ಚಿಸಿ ಯೋಗ್ಯ ಕ್ರಮ ತೆಗೆದುಕೊಳ್ಳಲು ಸರ್ವಪಕ್ಷ ಸಮ್ಮೇಳನವನ್ನು ಕೂಡಲೇ ಕರೆಯಬೇಕು.

ಆಹಾರ ಪ್ರಶ್ನೆಯನ್ನು ರಾಷ್ಟ್ರೀಯ ಸಮಸ್ಯೆಯೆಂದೂ, ಪಕ್ಷಾತೀತ ಪ್ರಶ್ನೆಯೆಂದೂ ಪರಿಗಣಿಸಬೇಕೆಂದು ಎಲ್ಲರ ಅಭಿಪ್ರಾಯವಾಗಿರುವುದರಿಂದ ಮೇಲಿನ ಕ್ರಮಗಳು ಬಹಳ ಅಗತ್ಯ. ಸರಕಾರ ಇದನ್ನು ಅಸಡ್ಡೆ ಮಾಡಿದರೆ ಪರಿಸ್ಥಿತಿ ವಿಷಮಗೊಳ್ಳುವುದೆಂದು ಕಮ್ಯೂನಿಸ್ಟ್ ಪಾರ್ಟಿ ಎಚ್ಚರಿಸುತ್ತದೆ.

ಕಾರ್ಮಿಕ ಹೋರಾಟಕ್ಕೆ ಬೆಂಬಲ

ಹಟ್ಟಿಯ ಚಿನ್ನದ ಗಣಿ ಕೆಲಸಗಾರರೂ ಬೆಂಗಳೂರಿನ ಚಂದ್ರಾ ಮತ್ತು ಕೃಷ್ಣಾ ಮಿಲ್ಲುಗಳ ಕಾರ್ಮಿಕರೂ ತಮ್ಮ ನ್ಯಾಯವಾದ ಬೇಡಿಕೆಗಳಿಗೆ ನಡೆಸುತ್ತಿರುವ ಹೋರಾಟಗಳಿಗೆ ಕಮ್ಯೂನಿಸ್ಟ್ ಪಾರ್ಟಿಯು ಬೆಂಬಲ ಕೊಡುತ್ತದೆ. ಈ ವಿವಾದಗಳನ್ನು ಬಗೆಹರಿಸಲು ಮೈಸೂರು ಸರಕಾರ ಕೂಡಲೇ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಒತ್ತಾಯಪಡಿಸುತ್ತದೆ. ಎಲ್ಲ ಪಾರ್ಟಿ ಘಟಕಗಳೂ ಕಾರ್ಮಿಕರಿಗೆ ಸಕ್ರಿಯ ಬೆಂಬಲ ನೀಡುವುದಲ್ಲದೆ ನಿರ್ಣಯಗಳನ್ನು ಮಾಡಿ ಸರಕಾರಕ್ಕೆ ಕಳಿಸಬೇಕೆಂದೂ ಪ್ರಾಂತ ಸಮಿತಿಯು ವಿನಂತಿಸುತ್ತದೆ.

ಎಲ್ಲ ಪಾರ್ಟಿ ಸಮಿತಿಗಳೂ, ಶಾಖೆಗಳೂ ಈ ಆಧಾರದ ಮೇಲೆ ಇತರ ಎಲ್ಲ ಪಕ್ಷಗಳ ಮತ್ತು ಜನವಿಭಾಗಗಳ ಸಹಕಾರದ ಮೇಲೆ ಒತ್ತಾಯ ತರಬೇಕೆಂದೂ ಪ್ರಾಂತ ಸಮಿತಿಯು ವಿನಂತಿಸುತ್ತದೆ.

'ಜನಶಕ್ತಿ' ಚಂದಾದಾರರು, ಓದುಗರು ಮತ್ತು ಏಜಂಟರ ಗಮನಕ್ಕೆ

'ಜನಶಕ್ತಿ' ಆರಂಭದಿಂದಲೂ ಈವರೆಗೆ ಹತ್ತು ಪುಟಗಳು ಪ್ರಕಟವಾಗುತ್ತಿದೆ. ಆದಷ್ಟು ವಿಷಯಗಳನ್ನು ಪ್ರಕಟಿಸಲು ಯತ್ನಿಸಿದರೂ ಸ್ಥಳ ಸಂಕೋಚದಿಂದ ಕೆಲವು ವಿಷಯಗಳನ್ನು ಕೈ ಬಿಡಬೇಕಾಗಿದೆ. ಈ ತೊಂದರೆಯನ್ನು ನಿವಾರಿಸುವ ದೃಷ್ಟಿಯಿಂದ 'ಜನಶಕ್ತಿ' ಪುಟಗಳನ್ನು ಹೆಚ್ಚಿಸಲು ತೀರ್ಮಾನಿಸಿದ್ದೇವೆ. ಪುಟಗಳನ್ನು ಹೆಚ್ಚಿಸಿದಂತೆ ಬೆಲೆಯನ್ನು ಸ್ವಲ್ಪ ಹೆಚ್ಚಿಸುವುದು ಅನಿವಾರ್ಯವಾಗಿದೆ. ಚಂದಾದಾರರು, ಓದುಗರು, ಮತ್ತು ಏಜಂಟರು ಈ ಬದಲಾವಣೆಯನ್ನು ಸ್ವಾಗತಿಸುವರೆಂದು ನಮಗೆ ವಿಶ್ವಾಸವಿದೆ. ಅವರ ಸಹಕಾರವನ್ನು ಕೋರುತ್ತೇವೆ.

ನವೆಂಬರ್ 1ಕ್ಕೆ 'ಜನಶಕ್ತಿ' ಪ್ರಕಟಣೆಯ ಆರು ವರ್ಷ ಮುಗಿದು ಏಳನೆಯ ವರ್ಷಾರಂಭವಾಗುತ್ತದೆ. ಪುಟಗಳು ಮತ್ತು ಬೆಲೆಯ ಬದಲಾವಣೆ ಅಂದಿನಿಂದ ಜಾರಿಗೆ ಬರುತ್ತದೆ.

ನವೆಂಬರ್ ೧ ರಿಂದ (ಸಂಪುಟ ೭–ಸಂಚಿಕೆ ೧) 'ಜನಶಕ್ತಿ' ಪುಟಗಳನ್ನು ೧೦ ರಿಂದ ೧೨ ಕ್ಕೆ ಹೆಚ್ಚಿಸಲಾಗುವುದು. ಬೆಲೆಯನ್ನು ಈಗಿನ ೦.೧೩ ನ. ಪೈಸೆಯಿಂದ ೦.೧೫ ನ. ಪೈಸೆಗಳಿಗೆ ಹೆಚ್ಚಿಸಲಾಗುವುದು. ಈ ಬದಲಾವಣೆಯನ್ನು ಓದುಗರು ಮತ್ತು ಏಜಂಟರಗಳು ಗಮನಿಸಬೇಕಾಗಿ ವಿನಂತಿ.

'ಜನಶಕ್ತಿ'ಯ ಹೊಸ ಚಂದಾ ವಿವರ

12 ಪುಟಗಳು — ಬಿಡಿ ಪ್ರತಿ 0·15 ನಯೆ ಪೈಸೆ

ವಾರ್ಷಿಕ ಚಂದಾ ರೂ. 7·50 — ಆರು ತಿಂಗಳಿಗೆ 3·75

ಈಗ ಚಂದಾದಾರರಾಗಿರುವವರಿಗೆ ಚಂದಾ ಮುಗಿಯುವವರೆಗೂ ಪತ್ರಿಕೆ ಕಳಿಸಲಾಗುವುದು. ಮುಂದುವರಿಸುವಾಗ ಹೊಸ ದರದಲ್ಲಿ ಚಂದಾ ಹಣ ಪಾವತಿ ಮಾಡಬೇಕು. ಡಿಸೆಂಬರ್ ೧೯೫೮ರ ಅಂತ್ಯದವರೆಗೆ ಚಂದಾದಾರರಾಗುವವರಿಗೆ ವಿಶೇಷ ರಿಯಾಯಿತಿಯನ್ನು ಕೊಡಲಾಗುವುದು. ಅವರು ಹಳೆಯ ದರದಲ್ಲಿ ವಾರ್ಷಿಕ ರೂ. ೬/– ಆರು ತಿಂಗಳಿಗೆ ರೂ. ೩/– ಚಂದಾ ಹಣ ಪಾವತಿ ಮಾಡಿದರೆ ಸಾಕು.

ಹೆಚ್ಚಿನ ವಿವರಗಳಿಗೆ ಇಂದೇ ಬರೆಯಿರಿ :

ಮ್ಯಾನೇಜರ್,

ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

L-59, ಕಾಶೀವಿಶ್ವೇಶ್ವರಗುಡಿ ರಸ್ತೆ – ಸುಲ್ತಾನಪೇಟೆ – ಬೆಂಗಳೂರು-2

ಸಂಪಾದಕೀಯ

ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗ ಕೂಡಲೇ ನಿಲ್ಲಲಿ

ಕಳೆದ ಮಾರ್ಚ್ ತಿಂಗಳ ಅಂತ್ಯದಲ್ಲಿ ಏಕಪಕ್ಷೀಯವಾಗಿ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸಿದ ಸೋವಿಯತ್ ಯೂನಿಯನ್ ಈಗ ಮತ್ತೆ ಪ್ರಯೋಗಗಳನ್ನಾರಂಭಿಸಿರುವುದಾಗಿ ತಿಳಿಸಿದೆ. ತನ್ನ ಈ ನಿರ್ಧಾರ ಕುರಿತು ಇತ್ತಿರುವ ಹೇಳಿಕೆಯಲ್ಲಿ ಸೋವಿಯತ್ ಯೂನಿಯನ್ ಅಮೆರಿಕ ಮತ್ತು ಬ್ರಿಟನ್ನುಗಳು ಪ್ರಯೋಗವನ್ನು ನಿಲ್ಲಿಸದಿರುವುದೇ ಇದಕ್ಕೆ ಕಾರಣವೆಂದು ತಿಳಿಸಿದೆ. ಸೋವಿಯತ್ ಯೂನಿಯನ್ ಏಕ ಪಕ್ಷೀಯವಾಗಿ ಪ್ರಯೋಗ ನಿಲ್ಲಿಸಿದುದನ್ನು ದುರುಪಯೋಗಪಡಿಸಿಕೊಂಡು ಬ್ರಿಟನ್ ಅಮೆರಿಕಗಳು ಹೆಚ್ಚು ಪ್ರಯೋಗ ನಡೆಸುತ್ತಿರುವುದನ್ನೂ ಸಹ ಸೋವಿಯತ್ ಯೂನಿಯನ್ ಪ್ರಸ್ತಾಪಿಸಿದೆ. ಈ ಸಂದರ್ಭದಲ್ಲಿ ಸೋವಿಯತ್ ಯೂನಿಯನ್ ಪ್ರಯೋಗಗಳನ್ನು ಮುಂದುವರಿಸುವುದು ಅನಿವಾರ್ಯವಾಗಿದೆಯೆಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸೋವಿಯತ್ ಯೂನಿಯನ್ ಪ್ರಯೋಗಗಳನ್ನು ಏಕ ಪಕ್ಷೀಯವಾಗಿ ನಿಲ್ಲಿಸಿದಾಗಲೇ, ಪಶ್ಚಿಮ ರಾಷ್ಟ್ರಗಳು ಪ್ರಯೋಗವನ್ನು ನಿಲ್ಲಿಸದಿದ್ದಲ್ಲಿ ಸೋವಿಯತ್ ಯೂನಿಯನ್ ಸಹ ಮತ್ತೆ ಆರಂಭಿಸಬೇಕಾದೀತು ಎಂದು ತಿಳಿಸಿತ್ತು. ಅಂದು ಸೋವಿಯತ್ ಯೂನಿಯನ್ ಪ್ರಯೋಗಗಳನ್ನು ನಿಲ್ಲಿಸುವುದಾಗಿ ಘೋಷಿಸಿದಾಗ ಇಡೀ ವಿಶ್ವದ ಶಾಂತಿ ಪ್ರಿಯಜನ ಕೋಟಿ ಅದನ್ನು ಸ್ವಾಗತಿಸಿ, ಕೊಂಡಾಡಿತು. ಅಮೆರಿಕ ಬ್ರಿಟನ್‌ಗಳೂ ಸಹ ಪ್ರಯೋಗಗಳನ್ನು ನಿಲ್ಲಿಸಬೇಕೆಂದು ಪ್ರಬಲವಾದ ಒತ್ತಾಯ ಚಳವಳಿಯು ಉಂಟಾಯಿತು. ಇಂದು ಮತ್ತೆ ಈ ಪ್ರಶ್ನೆಯು ಮರುಕಳಿಸಿರುವುದು ವಿಶ್ವದ ಜನತೆಯಲ್ಲಿ ಕಳವಳ ಉಂಟು ಮಾಡಿದೆ. ಅಮೆರಿಕ ಮತ್ತು ಬ್ರಿಟನ್ನುಗಳ ಧೋರಣೆಯೇ ಇದಕ್ಕೆ ಹೊಣೆಯಾಗಿದೆ.

ಸೋವಿಯತ್ ಯೂನಿಯನ್ ಆರಂಭದಿಂದಲೂ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗದ ನಿಲುಗಡೆಗಾಗಿ ಅನೇಕ ಸಲಹೆಗಳನ್ನು ಮಂಡಿಸುತ್ತ ಬಂದಿದ್ದರೂ ಸಹ ಅಮೆರಿಕ ಬ್ರಿಟನ್‌ಗಳು ಅವನ್ನು ತಿರಸ್ಕರಿಸಿವೆ. ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗಗಳಿಂದಾಗಿರುವ ಹಾನಿಯು ಎಷ್ಟು ದುಷ್ಪರಿಣಾಮವುಳ್ಳದ್ದೆಂದು ತಿಳಿದಿದ್ದರೂ, ವಿಶ್ವದ ವಿಜ್ಞಾನಿಗಳು ಈ ಬಗ್ಗೆ ಏಕಾಭಿಪ್ರಾಯವಿತ್ತಿದ್ದರೂ ಸಹ, ಅಮೆರಿಕ ಬ್ರಿಟನ್‌ಗಳು ಅವುಗಳ ಕಡೆ ಗಮನ ಕೊಡದೆ ಇವೆ.

ಇತ್ತೀಚೆಗೆ ಜಿನೀವಾದಲ್ಲಿ ನಡೆದ ವಿಜ್ಞಾನಿಗಳ ಸಮ್ಮೇಳನವು ಯಶಸ್ವಿಯಾಗಿದ್ದು, ಅದರಲ್ಲಿ ನ್ಯೂಕ್ಲಿಯರ್ ಸ್ಫೋಟಗಳ ತನಿಖೆ ಮಾಡಲು ಸಾಧ್ಯವೆಂದೂ, ಅದರ ವ್ಯವಸ್ಥೆ ಮಾಡಬಹುದೆಂದೂ ಅಭಿಪ್ರಾಯಪಟ್ಟಿತು. ಈ ಸಮ್ಮೇಳನ ನ್ಯೂಕ್ಲಿಯರ್ ಸ್ಫೋಟಗಳನ್ನು ಪತ್ತೆ ಹಚ್ಚುವ ಮತ್ತು ಹತೋಟಿಯಲ್ಲಿರಿಸುವ ದೊಡ್ಡ ಆತಂಕವನ್ನು ನಿರ್ಮೂಲ ಮಾಡಿತು. ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವ ಬಗ್ಗೆ ಒಪ್ಪಂದವುಂಟಾಗಲು ದಾರಿ ಸುಗಮವಾಯಿತೆನಿಸಿತು. ಅಮೆರಿಕ ಮತ್ತು ಬ್ರಿಟನ್‌ಗಳೂ ಸಹ ಪ್ರಯೋಗಗಳನ್ನು ನಿಲ್ಲಿಸಬಹುದೆಂಬ ಊಹಾಪೋಹಗಳು ಎದ್ದಿದ್ದುವು. ಆದರೆ ಇಂದು ಅವೆಲ್ಲವೂ ಸಹ ಭಗ್ನವಾಗಿವೆಯೆಂದೇ ಹೇಳಬಹುದು.

ಈ ತಿಂಗಳ ಅಂತ್ಯದಲ್ಲಿ ಜಿನೀವಾದಲ್ಲಿ ನ್ಯೂಕ್ಲಿಯರ್ ಪ್ರಯೋಗಗಳನ್ನು ನಿಲ್ಲಿಸುವ ಬಗ್ಗೆ ನಡೆಯಲಿರುವ ಮಾತುಕತೆಗಳು ವಿದೇಶಾಂಗ ಸಚಿವರುಗಳ ಮಟ್ಟದಲ್ಲಿ ನಡೆಯಬೇಕೆಂದು ಸೋವಿಯತ್ ಯೂನಿಯನ್ ಸೂಚಿಸಿದೆ. ಸೋವಿಯತ್ ಯೂನಿಯನಿನ ಈ ಸಲಹೆಯ ಅಮೆರಿಕವು ಈಗಾಗಲೇ ನಿರಾಕರಿಸಿದೆ. ಈ ರೀತಿ ಅಮೆರಿಕ ಮತ್ತು ಬ್ರಿಟನ್ನುಗಳು ಹೆಜ್ಜೆ ಹೆಜ್ಜೆಗೂ ಸೋವಿಯತ್ ಯೂನಿಯನಿನ ಉಪಯುಕ್ತ ಸಲಹೆಗಳನ್ನು ತಿರಸ್ಕರಿಸುತ್ತಿರುವುದು ಖಂಡನೀಯವಾಗಿದೆ. ನ್ಯೂಕ್ಲಿಯರ್ ಶಸ್ತ್ರಗಳ ವಿರುದ್ಧ ವಿಶ್ವದಾದ್ಯಂತ ಚಳವಳಿ ಪ್ರಬಲವಾಗಿದೆ. ಅದು ಇನ್ನಷ್ಟು ಪ್ರಬಲಗೊಂಡು, ಬಲವಾದ ಒತ್ತಾಯ ತರುವುದು ಇಂದು ಅತ್ಯಗತ್ಯವಾಗಿದೆ. ಮಾನವಕೋಟಿಯ ರಕ್ಷಣೆಗಾಗಿ ಈ ಚಳವಳಿಯನ್ನು ದೃಢವಾಗಿ ಸಾಗಿಸಬೇಕಾಗಿದೆ.

ವಾರದ ವಿಶ್ವ ಸಮೀಕ್ಷೆ

ಸರ್ವಾಧಿಕಾರದತ್ತ ಪಾಕಿಸ್ತಾನ

ಪಶ್ಚಿಮ ಯೂರೋಪಿನಲ್ಲಿ ಫ್ರಾನ್ಸಿನ ಡಿಗಾಲ್ ಸರ್ವಾಧಿಕಾರವನ್ನು ಸಾರಿ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿದ ವಾರ್ತೆಗೆ ಸರಿಗಟ್ಟುವಂತಹ ಘಟನೆಯೊಂದು ಏಷ್ಯಾದಲ್ಲಿ—ಭಾರತಕ್ಕೆ ಅತುಕೊಂಡಿರುವ ರಾಷ್ಟ್ರವೊಂದರಲ್ಲಿ ಕಳೆದ ವಾರ ನಡೆಯಿತು. ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು 1956ರಲ್ಲಿ ಜಾರಿಗೆ ಬಂದಿದ್ದ ರಾಜ್ಯಾಂಗವನ್ನೇ ರದ್ದುಗೊಳಿಸಿ ಪಾಕಿಸ್ತಾನಾದ್ಯಂತ ಮಾರ್ಷಲ್ ಲಾ ಆಡಳಿತೆಯನ್ನು ತರುವ ಘೋಷಣೆ ಮಾಡಿದರು. ಇದರ ಪರಿಣಾಮವೆಂದರೆ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳೆಲ್ಲವೂ ರದ್ದಾಗಿವೆ. ಕೇಂದ್ರ ಹಾಗೂ ಪ್ರಾಂತೀಯ ಶಾಸನ ಸಭೆಗಳೂ ವಿಸರ್ಜಿಸಲ್ಪಟ್ಟಿವೆ. ಎಲ್ಲಾ ರಾಜಕೀಯ ಪಕ್ಷಗಳೂ ರದ್ದುಗೊಳಿಸಲ್ಪಟ್ಟಿವೆ. ಮಾರ್ಷಲ್ ಲಾ ಆಡಳಿತಾಧಿಕಾರವನ್ನು ವಹಿಸಿಕೊಂಡಿರುವ ಜನರಲ್ ಆಯೂಬ್ ಖಾನ್‌ರವರು ಆಜ್ಞೆಯೊಂದನ್ನು ಹೊರಡಿಸಿ ಅಧ್ಯಕ್ಷ ಇಸ್ಕಂದರ್‌ರವರ ಕ್ರಮವನ್ನು ಟೀಕಿಸಬಾರದೆಂದು ಪತ್ರಿಕೆಗಳ ಬಾಯಿಗೆ ಬೀಗ ಹಾಕಿದ್ದಾರೆ.

ಪಾಕ್ ಅಧ್ಯಕ್ಷರು ಹೊರಡಿಸಿರುವ ಈ ಆಜ್ಞೆಯಿಂದ ಪಾಕಿಸ್ತಾನದಲ್ಲಿಯ ಸ್ಥಿತಿ-ಗತಿ, ಆಡಳಿತ ವೈಖರಿ ಇವುಗಳ ಸ್ವರೂಪ ದರ್ಶನವಾಗಿದೆ. ಜನತೆಗೆ ಆಡಳಿತದಲ್ಲಿ ನಂಬಿಕೆ ಕುಸಿದು ಬಿದ್ದಿದೆ. ಕಚ್ಚಾಟ, ಮೋಸ, ದುರಾಶೆ, ಆಹಾರ ಮತ್ತು ಔಷಧಗಳ ಕಳ್ಳ ಸಾಗಾಣಿಕೆ ಅಪರಿಮಿತವಾಗಿ ಹೆಚ್ಚಿವೆ. ಯಾವ ನಾಗರಿಕ ಲಕ್ಷಣಗಳೂ ಇಲ್ಲಿಯ ರಾಜಕೀಯ ಪಕ್ಷಗಳಲ್ಲಿ ಉಳಿದಿಲ್ಲ ಎಂಬುದಾಗಿ ಇನ್ನೂ ಅನೇಕ ಅಧಃಪತನದ ಲಕ್ಷಣಗಳನ್ನು ತೋರಿಸಿದ್ದಾರೆ.

ಚುನಾವಣೆಯಿಂದಲೂ ಸ್ಥಿತಿ ಸುಧಾರಿಸಲಾರದು ಎಂದು ಹೇಳಿದ ಅಧ್ಯಕ್ಷರ ಈ ಕ್ರಮ ರಾಜಕೀಯ ವಲಯಗಳಲ್ಲಿ ವಿಶೇಷ ತರದ ಪ್ರತಿಕ್ರಿಯೆಗಳನ್ನು ಕೆರಳಿಸುತ್ತಿದೆ. ಪಾಕಿಸ್ತಾನವು ಸರ್ವಾಧಿಕಾರದಲ್ಲಿ ಮೊದಲಬಾರಿ ಹೆಜ್ಜೆ ಹಾಕಿತು ಎಂದು ಅನೇಕರ ಅಭಿಪ್ರಾಯವಾಗಿದ್ದು ಕಾ॥ ಅಜಯ ಘೋಷರು ಪ್ರಕಟಣೆಯೊಂದನ್ನು ಹೊರಡಿಸಿ "ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಪಾಕಿಸ್ತಾನದ ಅಧ್ಯಕ್ಷರು ವೈಯಕ್ತಿಕ ಸರ್ವಾಧಿಕಾರ ಸ್ಥಾಪಿಸಲು ಯತ್ನಿಸುತ್ತಿದ್ದಾರೆ" ಎಂದು ತಿಳುಹಿಸಿದ್ದಾರೆ. ರಾಜ್ಯಾಂಗವನ್ನೇ ರದ್ದುಗೊಳಿಸಲಾಗಿರುವದರಿಂದ ಹೊಸ ಆಡಳಿತವು ಅಂತರ್ರಾಷ್ಟ್ರೀಯ ಮನ್ನಣೆಯನ್ನು ಪಡೆಯಬೇಕಾಗುವದೆಂದು ದೆಹಲಿಯಲ್ಲಿ ಭಾವಿಸಲಾಗುತ್ತಿದೆ. ಅಂತೂ ಪಾಕಿಸ್ತಾನದ ಪರಿಸ್ಥಿತಿ ಈಗ ವಿಚಿತ್ರ ಘಟ್ಟದಲ್ಲಿ ಖಚಿತವಾದ ಸ್ವರೂಪ ಪಡೆಯಲಿದೆ.

ಮನೆಗೆ ಮರಳಿದ ಮೊರಾರ್ಜಿ

ದೇಸಾಯಿ ರಣಛೋಡಜಿಯವರ ಪುತ್ರ ಮೊರಾರ್ಜಿ ಭಾರತ ದೇಶದ ಆರ್ಥಿಕ ಮಂತ್ರಿಯಾಗಿ ತನ್ನ ತಾಯಿನಾಡಿನ ಗೌರವವನ್ನು ಅಮೇರಿಕೆಯ ಕುಬೇರರಿಗೆ ಮಾರಿ ಇದೀಗ ಮರಳಿದ್ದಾರೆ. ಬ್ರಹ್ಮಚರ್ಯ, ಪಾನನಿರೋಧ, ವಾಕ್ಸಿನೇಷನ್ ಇವುಗಳ ಮೇಲೆ ವಿಚಿತ್ರವಾದ ವಿಚಾರಗಳನ್ನು ವ್ಯಕ್ತಪಡಿಸಿ, [ಸಂಬಂಧವಿಲ್ಲದ ಚೀನಾದ ವಿಷಯ ಮಾತನಾಡಿ] ವಾಲ್‌ಡಾರ್ಫ್ ಲಿಸ್ಟೋರಿಯಾ ಹೋಟೆಲಿನಲ್ಲಿ ತೇಗಿ ಸುಖವಾಗಿ ಮರಳಿದ್ದಾರೆ.

"ನೀವು ಬಂಡವಾಳ ತೊಡಗಿಸಲು ಭೀತಿಯೇನಿಲ್ಲ. ನಿಮಗೆ ಅನುಕೂಲವಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ, ನಿರ್ಮಾಣ ಮಾಡುತ್ತೇವೆ" ಎಂದು ಅಮೇರಿಕೆ ಕುಬೇರರಿಗೆ ಆಶ್ವಾಸನೆ ಇತ್ತು, ಭಾರತ ಸರ್ಕಾರದ ಔದ್ಯೋಗಿಕ ನೀತಿಯನ್ನು ಗಾಳಿಗೆ ತೂರಿ "ಖಾಸಗೀ ಬಂಡವಾಳಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತೇವೆ. ರಾಷ್ಟ್ರೀಕರಣ ನಮ್ಮ ಮುಖ್ಯ ವಿಚಾರ ಅಲ್ಲ" ಎಂದು ಹೇಳಿ ಬಂದಿದ್ದಾರೆ. [ವಿದೇಶದ ಖಾಸಗೀ ಬಂಡವಾಳಗಳಿಗೆ ಲಾಭದ ಪರಿಸ್ಥಿತಿಗಳನ್ನು ಸೃಷ್ಟಿಸಿ ಖಚಿತ ಆಶ್ವಾಸನೆಗಳನ್ನಿತ್ತು ಬಂದರು]. ವಿದೇಶೀ ವಿನಿಮಯಗಳನ್ನು ಬಲಪಡಿಸಲು 1956ರಲ್ಲಿ ಬಿರ್ಲಾ ಸಮಿತಿ ಒಪ್ಪಿಸಿದ ವರದಿಯನ್ನು ಮೊರಾರ್ಜಿಯವರು ಅಕ್ಷರಶಃ ನೆನಪಿಸಿಕೊಂಡು ಕಾರ್ಯ ಸಾಗಿಸಿದಂತೆ ತೋರುತ್ತದೆ. ಇದೇ ಕಾಲಕ್ಕೆ ಬಿರ್ಲಾ ಕೂಡ ಅಲ್ಲಿದ್ದರು.

"ನಿಮಗೆ ನಾನು ಸ್ಪಷ್ಟಪಡಿಸಬೇಕಾದುದೇನೆಂದರೆ ನಮ್ಮ ಸಮಾಜವಾದದ ಧಾಳಿ ಬಡತನದ ಮೇಲಿದೆಯೆ ವಿನಃ ಸಂಪತ್ತಿಯ ಮೇಲಿಲ್ಲ. ಎಲ್ಲರಿಗೂ ಸಮಾನವಕಾಶಗಳನ್ನು ಸೃಷ್ಟಿಸುವುದೇ ನಮ್ಮ ಗುರಿ ಇದೇ ಕೂಡ ನಿಮ್ಮ ಗುರಿಯಾಗಿತ್ತು. ನೀವೀಗ ಅದನ್ನು ಸಾಧಿಸಿದ್ದೀರಿ. ನಾವು ಆರಂಭಿಸಿದ್ದೇವೆ."

ಭಾರತದ ಆರ್ಥಿಕ ಮಂತ್ರಿ, "ಭಾವೀ ಪ್ರಧಾನ ಮಂತ್ರಿ" ಭಾರತದ ಸಮಾಜವಾದೀ ಸಮಾಜದ ಬಗ್ಗೆ ಹೊಂದಿರುವ ತಿಳುವಳಿಕೆ ಇಂಥದು. ಇವನ್ನು ಅಮೆರಿಕೆಯಲ್ಲಿ ಹೋದಲ್ಲೆಲ್ಲ ಅವರು ಸಾರಿ ಸಾರಿ ಹೇಳಿದರು. ಅಮೆರಿಕೆಯು ಅವರ ದೃಷ್ಟಿಯಲ್ಲಿ ಪರಿಪೂರ್ಣ ರಾಷ್ಟ್ರ—ಅವರ ಕಣ್ಣೆದುರಿನಲ್ಲೇ 5 ಮಿಲಿಯ ನಿರುದ್ಯೋಗಿಗಳು ಬೀದಿಯಲ್ಲಿ ತಿರುಗುತ್ತಿದ್ದರೆ ಇನ್ನೊಂದೆಡೆ ಉನ್ನತ ವರ್ಗಗಳ ಮಹಿಳಾ ನಾಯಿಕೆಯರು ತಮ್ಮ ನಾಯಿಗಳ ಜನ್ಮದಿನೋತ್ಸವದ ಸಂಭ್ರಮಕ್ಕೆಂದು ಷಾಂಪೇನ ಕುಡಿತದಲ್ಲಿ ತೊಡಗಿದ್ದಾಗ! ಇಂಥ ಸಮಾಜವಾದದ ಆದರ್ಶವನ್ನು ಭಾರತೀಯರಿಗೆ ಕೊಡಲು ತರಬೇತುಗೊಂಡು ಬಂದಿದ್ದಾರೆ ಮೊರಾರ್ಜಿ.

ಆದರೆ ಮೊರಾರ್ಜಿಯವರಿಗೆ ಭಾರತ ಜನ ಇತ್ತ ಸ್ವಾಗತ ಮಾತ್ರ ಬೇರೆ ರೀತಿಯದು. ಜನ ದಡ್ಡರಾಗಿಲ್ಲ. ಈಗೊಮ್ಮೆ ಭಾರತವನ್ನು ಶೋಷಿಸಿ ಹೋದವರಿಗಿಂತಲೂ ಹೆಚ್ಚಿನ ಕ್ರೂರಿಗಳನ್ನು ಭಾರತದಲ್ಲಿ ಸೇರಿಸಲು ಪ್ರಯತ್ನಿಸುತ್ತಿರುವ ಮೊರಾರ್ಜಿಯವರ ಪ್ರಯತ್ನಗಳನ್ನು ಜನ ತೀವ್ರವಾಗಿ ಖಂಡಿಸುತ್ತಿದ್ದಾರೆ.

(೯ನೇ ಪುಟ ನೋಡಿ)

ಕಾಂಗ್ರೆಸ್ ಪಕ್ಷದ ಸರ್ವಾಧಿಕಾರಿ—ದ್ವಿಮುಖ ನೀತಿಗೆ ಪ್ರತಿಭಟನೆ

ಮಂಗಳೂರು ನಗರ ಸಭೆಯಲ್ಲಿ ಸಭಾತ್ಯಾಗ

ಮಂಗಳೂರಿಗೆ ಯಾವ ಮುಖಂಡರೇ ಬರಲಿ ಅವರಿಗೊಂದು ಭಿನ್ನವತ್ತಳೆಯನ್ನೋ, ಪೌರ ಸನ್ಮಾನವನ್ನೋ ಕೊಡುವುದು ಮಂಗಳೂರು ನಗರ ಸಭೆಯ ಒಂದು ವಾಡಿಕೆ. ಪರವೂರಿನಿಂದ ಬರುವ ಪ್ರತಿಷ್ಠಿತ ವ್ಯಕ್ತಿಗಳಿಗೆ ಹೀಗೆ ಸನ್ಮಾನಿಸುವುದರಲ್ಲಿ ತಪ್ಪು ಕೂಡಾ ಇರಲಾರದು.

ಆದರೆ ಇಂತಹ ಪ್ರತಿಷ್ಠಿತ ವ್ಯಕ್ತಿಗಳು ಕಾಂಗ್ರೆಸ್ಸಿಗರಾಗಲೀ, ಅವರ ಪಕ್ಷಪಾತಿಗಳಾಗಲೀ ಆದರೆ ಮಾತ್ರ ಇಂತಹ ಸನ್ಮಾನ; ಪ್ರಜಾಪ್ರಭುತ್ವವೆಂದರೆ 'ಕಾಂಗ್ರೆಸಿಗೊಂದು ನೀತಿ—ಕಾಂಗ್ರೆಸ್ಸೇತರಿಗೊಂದು ನೀತಿ' ಎಂದು ನಗರ ಸಭೆಯ ಬಹುಪಕ್ಷವಾದ ಕಾಂಗ್ರೆಸ್ ಅನುಸರಿಸುತ್ತಿದೆ ಎಂದು ಇದೀಗ ಸ್ಪಷ್ಟವಾಗಿದೆ.

ಕಳೆದ ತಾ. 24ರಂದು ಮಂಗಳೂರಿಗೆ ಕೇರಳದ ಮುಖ್ಯ ಮಂತ್ರಿಯವರಿಗೆ ಮಂಗಳೂರು ನಗರ ಸಭೆ ಮಾನಪತ್ರವನ್ನು ಕೊಟ್ಟಿಲ್ಲ ಮಾತ್ರವಲ್ಲ ಈ ವಿಷಯದಲ್ಲಿ ಚರ್ಚಿಸಲು ನಗರ ಸಭೆಯು ಸಭೆ ಕರೆಯಬೇಕೆಂದು ನಾಲ್ಕು ಮಂದಿ ಕೌನ್ಸಿಲರುಗಳು ಪ್ರತ್ಯ ಪ್ರತ್ಯೇಕವಾಗಿ ಬರೆದ ಪತ್ರಕ್ಕೆ ಉತ್ತರ ಕೊಡುವ ಔದಾರ್ಯವನ್ನೂ ನಗರ ಸಭಾಪತಿ ಶ್ರೀ ಅಡಿಗರು ತೋರಲಿಲ್ಲ.

ಕಳೆದ ತಾ. 3ರಂದು ನಗರ ಸಭೆಯು ಸಾಮಾನ್ಯ ಸಭೆಯೊಂದು ನಡೆದಾಗ ಪ್ರತಿಪಕ್ಷದ ಧುರೀಣ ಶ್ರೀ ಶಾಂತಾರಾಮ ಪೈಯವರು ಈ ಕುರಿತು ವಿಧಿ ಬಿಂದುವನ್ನು ಎತ್ತಿ "ನೆರೆರಾಜ್ಯದ ಮುಖ್ಯ ಮಂತ್ರಿಯೊಬ್ಬರು ಬರುವಾಗ ಅವರಿಗೆ ಪೌರಸನ್ಮಾನವನ್ನು ಕೊಡದೆ; ಈ ವಿಷಯದಲ್ಲಿ ನಗರ ಸಭಾ ಸದಸ್ಯರು ಬರೆದ ಪತ್ರದಂತೆ ನಗರ ಸಭೆಯ ಸಭೆಯನ್ನೂ ಕರೆಯದೆ, ಈ ಪತ್ರಕ್ಕೆ ಉತ್ತರವನ್ನೂ ಕೊಡದೆ ಕಾಂಗ್ರೆಸ್ ಪಕ್ಷದ ಅಪ್ರಜಾಪ್ರಭುತ್ವ, ಸರ್ವಾಧಿಕಾರಿ ದ್ವಿಮುಖ ಧೋರಣೆಯನ್ನು ಚರ್ಚಿಸಲು ಅವಕಾಶ ಕೊಡಬೇಕೆ"ಂದರು. ಆದರೆ ನಗರ ಸಭಾಪತಿಗಳು ಇದಕ್ಕೆ ನಿರಾಕರಿಸಿ ವಿಧಿಬಿಂದುವನ್ನು ತಳ್ಳಿಹಾಕಿದರು. ಈ ನೀತಿಯನ್ನು ಪ್ರತಿಭಟಿಸಿ ಕಮ್ಯೂನಿಸ್ಟ್ ಗುಂಪಿನ 5 ಮಂದಿ ಸದಸ್ಯರೂ, ಶ್ರೀ ಎಸ್. ಜಿ. ಸಾಲೆನ್ನರೂ ಸಭಾತ್ಯಾಗ ಮಾಡಿದರು.

ಕೇರಳದಲ್ಲಿ ಕಮ್ಯೂನಿಸ್ಟ್ ಮಂತ್ರಿ ಮಂಡಲ ದ್ವಿಮುಖ ಧೋರಣೆಯನ್ನನುಸರಿಸುತ್ತಿದೆಯೆನ್ನುವ ಕಾಂಗ್ರೆಸ್ ಪಕ್ಷ ಆಡಳಿತೆಯಲ್ಲಿರುವ ಮಂಗಳೂರು ನಗರ ಸಭೆಯ ಈ ದ್ವಿಮುಖ ಧೋರಣೆಯ ಕುರಿತು ಶ್ರೀ ದೇಭಾರ್ ಭಾಯಿಯವರು ಏನೆನ್ನುವರೊ ?

ನಗರ ಸಭೆಗಳು ಮತ್ತು ಸರಕಾರದ ನೀತಿ

ಹುಬ್ಬಳ್ಳಿ ನಗರ ಸಭೆಯನ್ನು ರದ್ದು ಪಡಿಸಿದ್ದು ನ್ಯಾಯವೇ?

ಕರ್ನಾಟಕದಲ್ಲಿ ಎರಡನೇ ಅತಿದೊಡ್ಡ ನಗರವಾದ ಹುಬ್ಬಳ್ಳಿಯ ನಗರಸಭೆಯನ್ನು ಮೈಸೂರು ಸರಕಾರದವರು ರದ್ದುಪಡಿಸಿ, ಅದರ ಆಡಳಿತೆಯನ್ನು ತಮ್ಮ ವಶಪಡಿಸಿಕೊಂಡಿರುವರು. ಸರಕಾರದ ಈ ಕ್ರಮ ದೇಶದ ಪ್ರಜಾಪ್ರಭುತ್ವ ಪದ್ಧತಿಗೆ ಕೊಡಲಿ ಏಟು ಕೊಟ್ಟಂತಾಗಿದೆಯೆಂದರೆ ತಪ್ಪಾಗಲಾರದು.

ನಗರ ಸಭೆಗಳ ಆಡಳಿತೆ ಸಮರ್ಪಕವಾಗಿ ನಡೆಯದೆ ನಾಗರೀಕರಿಗೆ ಸವಲತ್ತುಗಳನ್ನೊದಗಿಸಿಕೊಡುವುದರಲ್ಲಿ, ತಪ್ಪುತ್ತಿವೆಂಬುದರಲ್ಲಿ ಸಂಶಯವಿಲ್ಲ. ಕರ್ನಾಟಕದ ಎಲ್ಲಾ ನಗರ ಸಭೆಗಳಲ್ಲಿಯೂ, ಗುಂಪು ರಾಜಕಾರಣ, ದುರಾಡಳಿತೆ, ಸ್ವಾರ್ಥ ಸಾಧನೆ, ಲಂಚಗುಳಿತನ, ಅಧಿಕಾರದ ದುರುಪಯೋಗ, ಆಡಳಿತೆಯಲ್ಲಿ ಕೈವಾಡ, ಸಾರ್ವಜನಿಕ ಹಣದ ದುರುಪಯೋಗ ದೈನಂದಿನ ನಡೆಯುತ್ತಿದ್ದು, ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ, ಜನತೆಯ ಆತ್ಯಾವಶ್ಯಕ ಬೇಡಿಕೆಗಳನ್ನು ಪೂರೈಸಿಕೊಡುವ ರೀತಿಯಲ್ಲಿ ಆಡಳಿತೆ ನಡೆಯುತ್ತಿಲ್ಲ.

ನಗರಸಭಾ ಸದಸ್ಯರ, ಅನೀತಿ, ಕಾಯಿದೆಗೆ ವಿರುದ್ಧ ಕ್ರಮಗಳು, ನಾಗರೀಕರ ಹಿತಗಳ ಅಲಕ್ಷಿಸುವಿಕೆ, ಲಂಚಗುಳಿತನ ಮೊದಲಾದಂಥವೆಲ್ಲ ಬಯಲಿಗೆ ಬಿದ್ದರೂ ಕೂಡ, ನಾಗರೀಕರು ಅವುಗಳ ವಿರುದ್ಧ ಪ್ರತಿಭಟಿಸಲಿಕ್ಕೆ ತಯಾರಾಗುವುದಿಲ್ಲ. ತಮ್ಮ ವೈಯಕ್ತಿಕ ಕೆಲಸವಾದರೆ ಸಾಕೆಂದು ಮೌನವಾಚರಿಸುತ್ತಾರೆ. ನಗರಸಭೆಯ ದುರಾಡಳಿತೆಯ ವಿರುದ್ಧ ಜನರು ಸಾಮೂಹಿಕವಾಗಿ ಪ್ರತಿಭಟಿಸದೇ ಇದ್ದರೆ ಆಡಳಿತೆಯಲ್ಲಿ ಸುಧಾರಣೆಯಾಗುವುದಿಲ್ಲ. ನಗರಸಭೆಯ ಸದಸ್ಯರ ಅಥವಾ ನಗರಸಭೆಯ ಚಟುವಟಿಕೆಗಳನ್ನು ಯಾವಾಗಲೂ ಪರಿಶೀಲಿಸುತ್ತಾ, ಯಾವದೇ ಒಂದು ಅಕ್ರಮ ಕೆಲಸ ಮಾಡಲ್ಪಟ್ಟರೆ, ಅದರ ವಿರುದ್ಧ ತ್ವರೆ ಮಾಡಿ ಯೋಗ್ಯ ಕ್ರಮವನ್ನು ಸರಕಾರದವರು ತೆಗೆದುಕೊಳ್ಳುವುದಿಲ್ಲ. ಲಂಚಗುಳಿತನದ ನೂರಾರು ಪ್ರಕರಣಗಳನ್ನು ಸರಕಾರದ ಗಮನಕ್ಕೆ ತಂದರೂ, ಅವರು ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಕಳೆದ ಹತ್ತಿಪ್ಪತ್ತು ವರ್ಷಗಳಿಂದ, ಬಿಜಾಪುರ ನಗರಸಭೆಯಲ್ಲಿ ನೂರಾರು ಸರ್-ಚಾರ್ಜ್ ಪ್ರಕರಣಗಳಿವೆಯೆಂದು ಲೆಕ್ಕ—ತಪಾಸಣೆ (ಆಡಿಟರರು) ಅಧಿಕಾರಿಗಳು ತೋರಿಸಿಕೊಟ್ಟದ್ದರೂ ಕೂಡ, ಸರಕಾರದವರು ಅವುಗಳನ್ನು ವಸೂಲು ಮಾಡಲು ಅಧಿಕಾರಿಗಳ ಮತ್ತು ಸದಸ್ಯರ ಮೇಲೆ ಯಾವದೇ ಕ್ರಮ ತೆಗೆದುಕೊಳ್ಳಲಿಲ್ಲ. ಹಣ ದುರ್ವ್ಯಯ ಮಾಡಿದ ಪ್ರಕರಣಗಳು, ಇಲಿಬಲೆ—ಪಾಯಖಾನೆ ಡಬ್ಬಿ ಪ್ರಕರಣ, ಹೆಚ್ಚು ಹಣ ಕೊಟ್ಟು ಮುನಿಸಿಪಾಲಿಟಿಗೆ ಜಾಗ ಖರೀದಿ ಮಾಡಿದ ಪ್ರಕರಣಗಳು, ಮನೆ ಪಟ್ಟಿಯ ಹಣ ತಿಂದುಹಾಕಿದ ಪ್ರಕರಣ, ಕಾಯಿದೆಗೆ ವಿರುದ್ಧವಾಗಿ ಕೆಲವು ನೌಕರದಾರರಿಗೆ ಹಣ ಕೊಟ್ಟ ಪ್ರಕರಣ, ಸೀನಿಯಾರಿಟಿಯನ್ನು ಉಲ್ಲಂಘಿಸಿದ ಪ್ರಕರಣಗಳನ್ನೆಲ್ಲ ಸರಕಾರದವರಿಗೆ ತೋರಿಸಿಕೊಟ್ಟರೂ, ಅವರು ಅವುಗಳ ಕುರಿತು ಯಾವದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಬಾಗಲಕೋಟೆ ಮುನಿಸಿಪಾಲಿಟಿಯಲ್ಲಿ ಮಂಜೂರಾತಿಯಿಲ್ಲದೆ, ರೂ. 50,000 ಖರ್ಚು ಮಾಡಿದ್ದು, ಜನತೆಗೆ ವಿರುದ್ಧ ವರ್ತಿಸುವ ಲೇಡಿ ಡಾಕ್ಟರನ್ನು ಖಾಯಂ ಮಾಡಿದ್ದು, ಕಡಿಮೆ ದರದ ಟೆಂಡರುಗಳನ್ನು ಮಂಜೂರು ಮಾಡದೆ, ತನಗೆ ಬೇಕಾದವರಿಗೆ ಮುನಿಸಿಪಲ್ ಕೆಲಸ ಒಪ್ಪಿಸಿಕೊಡುವುದು, ಜಾತೀಯ ತಳಹದಿಯ ಮೇಲೆ ನೇಮಣೂಕಿ ಮಾಡಿಕೊಳ್ಳುವುದು, ಕಾಯಂ ನೌಕರದಾರರನ್ನು ತಮ್ಮ ಸರ್ವಿಸ್ ಮುಗಿಯುವ ಮುಂಚೆಯೇ, ನೌಕರಿಯಿಂದ ತೆಗೆದುಹಾಕುವುದು ಮೊದಲಾದ ಪ್ರಕರಣಗಳು ಸರಕಾರದ ಮುಂದಿವೆ. ಇಂಥ ನೂರಾರು ಘಟನೆಗಳು ಕರ್ನಾಟಕದ ಪ್ರತಿಯೊಂದು ನಗರ ಸಭೆಗಳಲ್ಲಿಯೂ ನಡೆಯುತ್ತಿವೆ.

ಗ್ರಾಮ ಪಂಚಾಯಿತಿ, ನಗರ ಸಭೆಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು, ಅಧಿಕಾರ ವಿಕೇಂದ್ರೀಕರಣವಾಗಬೇಕೆನ್ನುವ ಕಾಲವಿದು. ಇಂಥ ಸಮಯದಲ್ಲಿ ಹುಬ್ಬಳ್ಳಿ ನಗರಸಭೆಯನ್ನು ರದ್ದು ಮಾಡಿದ್ದು ದೊಡ್ಡ ಅನ್ಯಾಯ. ಹುಬ್ಬಳ್ಳಿ ನಗರಸಭೆಯ ಹೊಸ ಅಧ್ಯಕ್ಷರು ಅಧಿಕಾರ ಸ್ವೀಕಾರ ಮಾಡಿ ಇನ್ನೂ ಮೂರು ತಿಂಗಳಾಗಲಿಲ್ಲ. ಇವರಿಗೆ ಆಡಳಿತೆಯಲ್ಲಿ ಸುಧಾರಣೆ ಮಾಡಲು ಆರು ತಿಂಗಳಾದರೂ ಅವಕಾಶ ಕೊಡಬೇಕಾಗಿತ್ತು. ಯಾವದೇ ಒಂದು ಮುನಿಸಿಪಾಲಿಟಿಯನ್ನು ರದ್ದು ಮಾಡಬೇಕಾದರೆ ಸರಕಾರದವರು, ಅಂಥ ನಗರಸಭೆಗಳಿಗೆ, ಕಾರಣಗಳನ್ನು ಕೊಟ್ಟು "ಶೋ-ಕಾಸ" ನೋಟೀಸು ಕೊಡಬೇಕಾಗುತ್ತದೆ. ಆ ಬಳಿಕ ರದ್ದು ಮಾಡುವ ಕ್ರಮ ಕೈಗೊಳ್ಳಬೇಕಾಗುತ್ತದೆ ಆದರೆ ಹುಬ್ಬಳ್ಳಿ ನಗರ ಸಭೆಗೆ ಅಂಥ ಶೋ-ಕಾಸ ನೋಟೀಸು ಕೊಡದೆ, ನಗರಸಭೆ ರದ್ದು ಮಾಡಿದು ಕಾಯಿದೆಗೆ ವಿರುದ್ಧವಾಗಿರುತ್ತದೆ.

ಅಧಿಕಾರ ಕಳೆದುಕೊಂಡ ಕೆಲವು ಸದಸ್ಯರ ಮತ್ತು ಸ್ಥಳೀಕ ಕಾಂಗ್ರೆಸ್ ಜನರ ಮಾತು ಕೇಳಿ, ಸರಕಾರದವರು ಈ ಅಕ್ರಮ ಕೆಲಸ ಮಾಡಿದೆಂದರೆ ತಪ್ಪಾಗಲಾರದು. ಹುಬ್ಬಳ್ಳಿಗಿಂತಲೂ ಕೆಟ್ಟ ಆಡಳಿತೆ ನಡೆಸುತ್ತಿರುವ ಹಲವಾರು ನಗರ ಸಭೆಗಳಿವೆ. ಆದರೆ ಸರಕಾರದವರು ಅಂಥ ನಗರ ಸಭೆಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಆದರೆ ಕೆಲವು ಕಾಂಗ್ರೆಸ್ಸಿನವರ ಮಾತು ಕೇಳಿ ಹುಬ್ಬಳ್ಳಿ ನಗರ ಸಭೆಯ ಮೇಲೆ ಬ್ರಹ್ಮಾಸ್ತ್ರವನ್ನೇ ಉಪಯೋಗಿಸಿದೆ. ಇದನ್ನು ಎಲ್ಲ ವಿಚಾರವಂತ ನಾಗರೀಕರೂ ವಿರೋಧಿಸಲೇ ಬೇಕು.

ಆಡಳಿತೆ ಸುಧಾರಿಸಲು ಸರಕಾರಕ್ಕೆ ಬೇಕಾದಷ್ಟು, ಅಧಿಕಾರವಿರುವಾಗ, ತನ್ನ ತಪ್ಪನ್ನು ಮರೆಮಾಡಿಕೊಳ್ಳಲು, ನಗರ ಸಭೆಯನ್ನು ರದ್ದು ಮಾಡುವ ಕ್ರಮ ಕೈಗೊಂಡಿದೆ. ಸರಕಾರಿ ಹುಕುಂ ಹೊರಡುವ ಮುಂಚಿತವಾಗಿಯೆ ಮಂತ್ರಿ ಟಿ. ಸುಬ್ರಮಣ್ಯಂರವರು, ಪತ್ರಿಕಾ ಪ್ರಕಟನೆ ತೆಗೆದು, ಹುಬ್ಬಳ್ಳಿ ಮುನಿಸಿಪಾಲಿಟಿ ರದ್ದು ಪಡಿಸಿದ್ದೇವೆಂದು ಹೇಳಿದ್ದು ತೀರ ಅನ್ಯಾಯದ್ದಾಗಿದೆ. ಕೇರಳದಲ್ಲಿ ಪಕ್ಷಪಾತತನದ ಆರೋಪ ಹೊರಿಸುತ್ತಿರುವ ಕಾಂಗ್ರೆಸ್ಸಿನವರು, ತಮ್ಮ ಜನರ ಮಾತು ಕೇಳಿ ಈ ರೀತಿ ಮನಬಂದಂತೆ ವರ್ತಿಸುತ್ತಿರುವುದನ್ನು ಜನತೆ ಬಲವಾಗಿ ಖಂಡಿಸಬೇಕು. ಅದರಂತೆಯೇ ಹುಬ್ಬಳ್ಳಿ ನಗರ ಸಭೆ ರದ್ದತಿಯನ್ನು ವಿರೋಧಿಸಬೇಕು.

ಎನ್. ಕೆ. ಉಪಾಧ್ಯಾಯ
ಬಿಜಾಪುರ

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ವಿವಾದವನ್ನು ಬೇಗನೆ ಬಗೆಹರಿಸಿ

— ಕೆ. ಪಿ. ಟಿ. ಯು. ಸಿ. ಯ ಮನವಿ —

ಕೆ. ಪಿ. ಟಿ. ಯು. ಸಿ. ಕಾರ್ಯಕಾರಿ ಸಮಿತಿಯು 8-10-1958ರಂದು ಕಾಂ| ವಾಸನ್‌ರವರ ಅಧ್ಯಕ್ಷತೆಯಲ್ಲಿ ಸೇರಿ, ವಿವಿಧ ಟ್ರೇಡ್ ಯೂನಿಯನುಗಳ ಸಮಸ್ಯೆಗಳನ್ನು ಪರಿಶೀಲಿಸಿ, ಈ ಕೆಳಗೆ ಕಂಡ ತೀರ್ಮಾನಗಳನ್ನು ಕೈಗೊಂಡಿತು.

1. ಈ ಕಾರ್ಯಕಾರಿ ಸಮಿತಿಯು, ಚಂದ್ರು ಮತ್ತು ಕೃಷ್ಣ ಮಿಲ್ ಕೆಲಸಗಾರರ ಮತ್ತು ಹಟ್ಟಿ ಚಿನ್ನದ ಗಣಿ ಕೆಲಸಗಾರರ ಹೋರಾಟಗಳಿಗೆ ಬೆಂಬಲ ನೀಡುತ್ತಾ, ರಾಜ್ಯ ಸರಕಾರವು ಕೂಡಲೇ ಮಧ್ಯಪ್ರವೇಶಿಸಿ ಈ ವಿವಾದಗಳನ್ನು ಇತ್ಯರ್ಥ ಮಾಡಬೇಕೆಂದು ಮತ್ತು ಎಲ್ಲಾ ಯೂನಿಯನ್‌ಗಳು ಈ ಹೋರಾಟಗಳಿಗೆ ಬೆಂಬಲ ನೀಡಬೇಕೆಂದು ತೀರ್ಮಾನಿಸಿದೆ.

2. ಈ ಸಮಿತಿಯು ಎ. ಐ. ಟಿ. ಯು. ಸಿ.ಯ ಜನರಲ್ ಕೌನ್ಸಿಲ್ ಸಭೆಯನ್ನು ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸಬೇಕೆಂದು ಆಹ್ವಾನವನ್ನು ನೀಡುತ್ತದೆ ಮತ್ತು ಎಲ್ಲಾ ಕೆಲಸಗಾರರು ಇದನ್ನು ಜಯಪ್ರದವನ್ನಾಗಿ ಮಾಡುವುದಕ್ಕೆ ಬೆಂಬಲ ನೀಡಬೇಕೆಂದು ಕೋರುತ್ತದೆ.

3. ಈ ಸಮಿತಿಯು, ಬೆಂಗಳೂರು ಕಾರ್ಪೊರೇಷನ್ ಕೆಲಸಗಾರರ ಸಂಘವು ನಡೆಸಲಿರುವ ಸಮ್ಮೇಳಕ್ಕೆ ಕೆ. ಪಿ. ಟಿ. ಯು. ಸಿ.ಗೆ ಸೇರಿರುವ ಎಲ್ಲಾ ಮುನಿಸಿಪಲ್ ಕೆಲಸಗಾರರ ಸಂಘಗಳು ಇದನ್ನು ಜಯಪ್ರದವನ್ನಾಗಿ ಮಾಡಲು ಮುಂದೆ ಬರಬೇಕೆಂದು ಕೋರುತ್ತದೆ.

4. ಈ ಸಮಿತಿಯು, ಸರಕಾರವು ಕೂಡಲೆ ಬಿ. ಐ. ಆರ್. ಆಕ್ಟನ್ನು ರದ್ದು

(೭ನೇ ಪುಟ ನೋಡಿ)

ರಷ್ಯದಿಂದ ಹಿಂತಿರುಗಲು ನನಗೆ ಮನಸ್ಸೇ ಇರಲಿಲ್ಲ

[ವಿಶ್ವವಿಖ್ಯಾತ ವಿಜ್ಞಾನಿ ಭಾರತ ರತ್ನ ಡಾ। ಸಿ. ವಿ. ರಾಮನ್‌ರವರು "ಲೆನಿನ್ ಶಾಂತಿ ಪಾರಿತೋಷಕ"ವನ್ನು ಸ್ವೀಕರಿಸಲು ಮಾಸ್ಕೋಕ್ಕೆ ಹೋಗಿದ್ದಾಗ, ಅವರೊಂದಿಗೆ ಶ್ರೀಮತಿ ಲೋಕಸುಂದರಿ ರಾಮನ್‌ರವರೂ ಸೋವಿಯತ್ ಯೂನಿಯನಿನಲ್ಲಿ ಎರಡು ವಾರ ಪ್ರವಾಸ ಮಾಡಿದರು. "ಡೆಕ್ಕನ್ ಹೆರಾಲ್ಡ್" ಪತ್ರಿಕಾ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಶ್ರೀಮತಿ ರಾಮನ್‌ರವರು ತಮ್ಮ ಪ್ರವಾಸಾನುಭವವನ್ನು ವಿವರಿಸಿದ್ದಾರೆ. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ, —ಸಂ.]

—★—

ಶ್ರೀಮತಿ ಲೋಕಸುಂದರಿ ರಾಮನ್‌ರವರ ಪ್ರವಾಸಾನುಭವ

ನಾನು ನ್ಯೂಯಾರ್ಕನ್ನು ನೋಡಿಲ್ಲ. ಆದರೆ ಯುರೋಪಿನ ಅನೇಕ ರಾಷ್ಟ್ರಗಳನ್ನು ನೋಡಿದ್ದೇನೆ. 29 ವರ್ಷಗಳ ಹಿಂದೆ ಡಾ॥ ರಾಮನ್‌ರವರಿಗೆ 'ನೊಬೆಲ್ ಬಹುಮಾನ' ಬಂದಿದ್ದಾಗ ನಾನು ಯುರೋಪಿನ ಪ್ರವಾಸ ಮಾಡಿದ್ದೆ. ಆದರೆ ಮಾಸ್ಕೋ ನಗರದಷ್ಟು ರಮ್ಯನಗರವನ್ನು ನಾನು ಈ ವರೆಗೆ ನೋಡಿರಲಿಲ್ಲ. ಸೋವಿಯತ್ ಯೂನಿಯನಿನ ರಾಜಧಾನಿ ಮಾಸ್ಕೋ ನಗರ ಅತ್ಯಂತ ಸುಂದರ ನಗರ. ಅಗಲವಾದ ಉದ್ದವಾದ ದೊಡ್ಡ ರಸ್ತೆಗಳಿವೆ. ಎಲ್ಲಿಯೂ ಒಂದು ಚೂರು ಕಾಗದವಾಗಲೀ ಬೇರೆ ಕಸವಾಗಲೀ ಕಾಣಬರುವುದಿಲ್ಲ. ರಸ್ತೆಗಳಲ್ಲಿ ಸೈಕಲ್‌ಗಳಿಗಾಗಿ ಮತ್ತು ಪಾದಚಾರಿಗಳಿಗಾಗಿ ಬೇರೆ ವಿಭಾಗವಿದೆ.

ರಸ್ತೆಯ ಇಕ್ಕೆಲಗಳಲ್ಲಿಯೂ ಸುಂದರವಾದ ಹೂವಿನ ಗಿಡಗಳಿವೆ. "ಪುಷ್ಪ ಬಾಡಿದೆಡೆ ಮಾನವ ಬಾಳಲಾರ" ಎಂಬ ನೆಪೋಲಿಯನ್ನನ ನಾಣ್ಣುಡಿಯನ್ನು ರಷ್ಯನರು ಪ್ರತಿಪಾದಿಸುವಂತೆ ಕಾಣುತ್ತದೆ. ಯಾರೂ ಒಂದು ಹೂವನ್ನೂ ಕೊಯ್ಯಲು ಹೋಗುವುದಿಲ್ಲ. ಇದು ನನಗೆ ಅಚ್ಚರಿ ಉಂಟುಮಾಡಿತು. ದೂರದಲ್ಲೊಂದು ಹಲಗೆಯ ಮೇಲೆ ಯಾರೂ ಪುಷ್ಪಗಳನ್ನು ಕೊಯ್ಯಬಾರದೆಂದು ಸೂಚಿಸಿದೆ ಅಷ್ಟೆ. ಪಾದಚಾರಿ ರಸ್ತೆಯಲ್ಲಿ ಕೂಡಲು ಬೆಂಚುಗಳಿವೆ. ಅವುಗಳು ಚೊಕ್ಕಟವಾಗಿರುವುದೇ ಅಲ್ಲದೆ ಅದರ ಮೇಲೆ ಒಂದು ಗೆರೆಯೂ ಇರುವುದಿಲ್ಲ. ಭಾರತದಲ್ಲಾದರೆ ಪ್ರತಿ ಬೆಂಚಿನ ಮೇಲೂ ಗ್ರಂಥಗಳನ್ನೇ ಕೊರೆಯಲಾಗಿರುತ್ತದೆ. ರಸ್ತೆಯಲ್ಲಿ ಅಲ್ಲಲ್ಲಿ ಕಸ ತುಂಬಲು ಡಬ್ಬಿಗಳಿರುತ್ತವೆ. ಇವು ಮುಚ್ಚಳದಿಂದ ಮುಚ್ಚಲ್ಪಟ್ಟಿರುತ್ತವೆ. ಮುದುಕರಾಗಲೀ ಹುಡುಗರಾಗಲೀ ಮುಚ್ಚಳವನ್ನು ತೆಗೆದು ಕಸವನ್ನು ಅದರಲ್ಲಿ ಹಾಕುತ್ತಾರೆ.

ಪ್ರೇಕ್ಷಣೀಯ ಪ್ರದೇಶಗಳನ್ನು ನೋಡಿದ್ದೇ ಅಲ್ಲದೆ ಶಿಶುಸಂರಕ್ಷಣಾ ಕೇಂದ್ರ, ಮಕ್ಕಳ ಕರ್ಮಶಾಲೆಗಳು, ವಿಶ್ರಾಂತಿ ಕೇಂದ್ರಗಳು ಮತ್ತು ಶಿಬಿರಗಳು ಇವುಗಳಿಗೂ ಭೆಟ್ಟಿಯಿತ್ತೆ. ರಷ್ಯದ ಸಂಪತ್ತೆಂದರೆ ಮಕ್ಕಳು. ರಷ್ಯನರು ಸುಂದರ ಜನಾಂಗವೇನಲ್ಲ. ಆದರೆ ಅವರ ಮಕ್ಕಳು ಪ್ರಪಂಚದಲ್ಲೇ ಅತ್ಯಂತ ಸುಂದರವಾದ್ದಾಗಿವೆ. ಶಿಶು ಸಂರಕ್ಷಣಾಲಯಗಳು ಶುಭ್ರವಾಗಿಯೂ, ಶಿಸ್ತಿನಿಂದ ಕೂಡಿದುದಾಗಿಯೂ, ಸುಸಂಘಟಿತವೂ ಆಗಿದೆ. ಪ್ರತಿ ಶಿಶುವಿಹಾರದಲ್ಲೂ 80—90 ಮಕ್ಕಳಿರುತ್ತವೆ. ಐದಾರು ಮಂದಿ ಉಪಾಧ್ಯಾಯರುಗಳು ಸರದಿಯ ಮೇಲೆ ಕೆಲಸ ಮಾಡುತ್ತಾರೆ. ಪಶ್ಚಿಮದ ಇತರ ರಾಷ್ಟ್ರಗಳಲ್ಲಿನಂತೆ, ರಷ್ಯಾದಲ್ಲಿ ತಾಯಂದಿರಿಗೆ ಕೆಲಸಕ್ಕೆ ಹೋಗುವಾಗ ಮಕ್ಕಳ ಯೋಚನೆಯಿಲ್ಲ. ಕೆಲಸಕ್ಕೆ ಹೋಗುವಾಗ ಆಕೆ ತನ್ನ ಮಗುವನ್ನು ಶಿಶುಸಂರಕ್ಷಣಾಲಯದಲ್ಲಿ ಬಿಡುತ್ತಾಳೆ. ಅಲ್ಲಿ ಅದರ ಪಾಲನೆಯನ್ನು ನೋಡಿಕೊಳ್ಳುತ್ತಾರೆ.

ಆರು ವರ್ಷ ತುಂಬುವವರೆಗೆ ಮಕ್ಕಳು ಶಿಶುವಿಹಾರದಲ್ಲಿರುತ್ತವೆ. ಆಗ ಅವಕ್ಕೆ ಏನೂ ಹೇಳಿ ಕೊಡುವುದಿಲ್ಲ. ಅನಂತರ ಮಗುವನ್ನು ಶಾಲೆಗೆ ಕಳಿಸಲಾಗುವುದು. ವೈಜ್ಞಾನಿಕ ಅಭಿವೃದ್ಧಿಯನ್ನು ಮಕ್ಕಳಿಗೆ ಸುಲಭ ರೂಪದಲ್ಲಿ ಪರಿಚಯ ಮಾಡಿಕೊಡಲಾಗುವುದು. ಮೋಟಾರು, ವಿಮಾನ, ಹಡಗು ಮೊದಲಾದುವುಗಳ ಮರದ ಮಾದರಿಯನ್ನು ಮಕ್ಕಳಿಗೆ ಕೊಡಲಾಗುವುದು. ಸ್ವಲ್ಪ ವಯಸ್ಸಾಗಿರುವ ಮಕ್ಕಳಿಗೆ ಲೋಹದಿಂದ ಮಾಡಿರುವ ಯಾಂತ್ರಿಕ ವಸ್ತುಗಳನ್ನು ಒದಗಿಸಲಾಗಿಸುವುದು.

ರಷ್ಯದಲ್ಲಿ ಮಕ್ಕಳು ಆರೋಗ್ಯವಾಗಿಯೂ, ದೃಢಕಾಯವಾಗಿಯೂ ಇವೆ. ಒಳ್ಳೆಯ ಪುಷ್ಟಿಯಾದ ಆಹಾರ ದೊರಕಿಸುವುದೇ ಇದಕ್ಕೆ ಕಾರಣ.

ರಷ್ಯದ ಶಾಲೆಗಳು ಸಾಕಷ್ಟು ದೊಡ್ಡವಾಗಿರುತ್ತವೆ. ದೊಡ್ಡ ಆಟದ ಮೈದಾನವಿರುತ್ತದೆ. ನಾನು ಭೇಟಿಯಿತ್ತ ಒಂದು ಶಾಲೆಯಲ್ಲಿ ಸಣ್ಣ ಟ್ರಾಂವೇ ಕೂಡ ಇತ್ತು. ಪ್ರತಿ ದೊಡ್ಡ ಶಾಲೆಯಲ್ಲಿಯೂ ಸಹ ಗ್ರಹವ್ಯೂಹದ ಮಾದರಿ (ಪ್ಲಾನೆಟೋರಿಯಂ) ಇದೆ. ಸುಸಜ್ಜಿತವಾದ ಈ ಶಾಲೆಗಳನ್ನು ನೋಡಿದವರಿಗೆ ಪ್ರಪಂಚದಲ್ಲಿ ಇಂದು ರಷ್ಯನರು ಅತ್ಯುತ್ತಮ ತಾಂತ್ರಿಕ ತಜ್ಞರಾಗಿರುವುದು ಆಶ್ಚರ್ಯವೆನಿಸದು. ಶಾಲೆಯ ಚಿಕ್ಕ ಹುಡುಗರಿಗೆ, ನಮಗೆ ತಿಳಿದಿರುವುದಕ್ಕಿಂತ ಹೆಚ್ಚು ಸ್ಪುಟ್ನಿಕ್‌ಗಳ ವಿಷಯ ತಿಳಿದಿದೆ.

ಶಾಲಾ ಕಾಲದಲ್ಲಿ ವಿದ್ಯಾರ್ಥಿಗಳು ಶ್ರಮವಹಿಸಿ ಅಭ್ಯಾಸ ಮಾಡುತ್ತಾರೆ. ಒಮ್ಮೆ ರಜೆ ಬರಿತೆಂದರೆ ಆಯಿತು ಅಭ್ಯಾಸದಿಂದ ಸಂಪೂರ್ಣವಾಗಿ ಮುಕ್ತರಾಗುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಪ್ರವಾಸ ಹೋಗುತ್ತಾರೆ.

ಪ್ರಖ್ಯಾತವಾಗಿರುವ ಸೋವಿಯತ್ ಮಕ್ಕಳ ಪಯನಿಯರ್ ಶಿಬಿರವೊಂದಕ್ಕೆ ಭೇಟಿ ಇತ್ತೆ. ಅದೊಂದು ಅಪೂರ್ವ ಅನುಭವ. ಕಾರ್ಯಕ್ರಮದಲ್ಲಿದ್ದಂತೆ ನಾನು ಭೇಟಿಕೊಡಬೇಕಿದ್ದ ಶಿಬಿರವೊಂದಿತ್ತು. ದಾರಿಯಲ್ಲಿ ಹೋಗುತ್ತಿರುವಾಗ ಇನ್ನೊಂದು ಶಿಬಿರದ ವಿದ್ಯಾರ್ಥಿಗಳು ಬಹುದೂರ

ನಡೆದು ಬಂದು
ಶಿಬಿರಕ್ಕೆ ಬರಬೆ
ದರು. ಆದ್ದರಿಂ
ಬದಲಿಸಿ ಆ ಶಿಬಿ
ರದ ವಿದ್ಯಾರ್ಥಿಗ
ಪೂರ್ವ ಅನುಭವ

ಪಯನಿರ್ ಶಿ
ದಳದ ಶಿಬಿರಗಳ
ಎಲ್ಲಾ ಕೆಲಸವನ
ಗೆ ಮಾಡುವುದು,
ಳಿಸುವುದು, ತೊ
ವುದು ಇತ್ಯಾದಿಗ
ಕ್ತವೆನಿಸಿದ ಹವ್ಯಾ
ತ, ತೈಲ ಚಿತ್ರಗ
ಟಪಾಟಗಳು ಇ
ತ್ತಾರೆ.

ರಷ್ಯದಲ್ಲಿ ಸ್ತ್ರೀ
ಸಮಾನ ಸ್ಥಾನ
ಚಟುವಟಿಕೆಯ
ಅವರು ಭಾಗಿಗಳ
ಎಂಜಿನಿಯರುಗಳ
ಳು, ಶಿಲ್ಪಿಗಳು,
ಗಳಾಗಿ ಸಹ ಕೆಲ
ನೊಮ್ಮೆ ಒಂದು
ಅದರ ಚಾಲಕ
ಈ ಉದ್ಯೋಗದ
ದನ್ನು ಕಂಡು ನ
ಯಿತು. ಇಂದು
ದಾರಿ ಗಾಣದಿದ
ಯಾರಿಗೂ ತಿಳಿದಿ
ವಿಯತ್ ಸ್ತ್ರೀ
ಮತ್ತು ಧೈರ್ಯ
ಕು. ಅದು ಹೇ
ದಾಗಿದೆ. ಆದರ
ಬೇಕು.

ರಷ್ಯದಲ್ಲಿ ಪ್ರ
ಸದ್ದಿಲ್ಲದೆ ಕೆಲಸ
ರಜಾ ದಿನಗಳನ್ನು
ಕಳೆಯುತ್ತಾನೆ.
ಲ್ಲಿ ಭಾನುವಾರ
ಅಂದು ಉದ್ಯಾನ
ದಲ್ಲಿ ಮತ್ತಿತರ
ಮಂದಿ ವಿರಾಮ
ರುವುದನ್ನು ಕಾ
ಬಂದರಂತೂ ಅ
ದಿನವಾಗುತ್ತದೆ.
ಗಿದ್ದರೂ ಎಲ್ಲ ಅ
ರುತ್ತವೆ.

ಸಾಮಾನ್ಯ ಸ
ಕಾರವು ಒದಗಿ
ನಮ್ಮಿಂದ ಊಹಿ
ದುದಾಗಿದೆ. ಸ
ಖೀ ರಾಜ್ಯದ ಸ್ಥಾ
ರುವ ನಮಗೆ ಅಲ್ಲಿ
ಸೌಲಭ್ಯಗಳು ಆ
ತ್ತದೆ. ಎಲ್ಲ ಬಗೆ
ವರಿಸುವಂಥ ವಿವ
ವಿದ್ಯಾನಿಲಯದ
ಸರಕಾರೀ ನೌಕ
ರು ಎಲ್ಲರಿಗೂ ವ
ಲಾಗುವುದು.
ದಲ್ಲಿ ಅವರ ವೆಚ್ಚ
ಅವರು ತಮಗೆ
ಗೃಹಕ್ಕೆ ಹೋಗ

ನೀವೇನು ಹೇಳುತ್ತೀರಿ?

ಸೆಪ್ಟಂಬರ 6ರಂದು ಆಹಾರ ಸಚಿವ ಜೈನ್‌ರವರು ಒಂದು ಸವಾಲಿಗೆ ಉತ್ತರ ಕೊಡುತ್ತ :

"1956—57ರಲ್ಲಿ 1,572·7 ಸಹಸ್ರ ಟನ್ ಗೋಧಿ ಮತ್ತು 551·1 ಸಹಸ್ರ ಟನ್ ಅಕ್ಕಿ ಹಾಗು 1957—58ರಲ್ಲಿ 3,033·1 ಸಹಸ್ರ ಟನ್ ಗೋಧಿ ಮತ್ತು 606·9 ಸಹಸ್ರ ಟನ್ ಅಕ್ಕಿ ದೇಶದೊಳಗಿಂದಲೇ ಸರಕಾರ ಕೊಂಡುಕೊಂಡಿತು.

"ಆಹಾರ ಧಾನ್ಯಗಳ ಸಂಗ್ರಹಾಲಯಗಳಲ್ಲಿ ತೂಕದಲ್ಲಿ ವ್ಯತ್ಯಾಸ, ಸಾಗಣೆ ಮುಂತಾದ ಕಾರಣಗಳಿಂದಾಗಿ ನಷ್ಟ ಸಂಭವಿಸಿದೆ. ಲೆಕ್ಕಕ್ಕೆ ತೆಗೆದುಕೊಳ್ಳದೆ ಇದ್ದ ಆಹಾರ ಧಾನ್ಯಗಳ ದಾಸ್ತಾನುಗಳ ಆಧಾರದ ಮೇಲೆ 1956ರಲ್ಲಿ ಸಂಭವಿಸಿದ ನಷ್ಟಗಳು ಈ ರೀತಿ ಇರುವವು: 20,300 ರೂ. ಬೆಲೆ ಬಾಳುವ 47·56 ಟನ್ ಗೋಧಿ ಕೆಟ್ಟು ಹೋಯಿತು. 37,200 ರೂ. ಬೆಲೆ ಬಾಳುವ 86·29 ಟನ್ ಗೋಧಿ ಲೆಕ್ಕಕ್ಕೆ ಸಿಕ್ಕಲಿಲ್ಲ. 63,000 ರೂ. ಬೆಲೆ ಬಾಳುವ 108·55 ಟನ್ ಅಕ್ಕಿ ಕೆಟ್ಟು ಹೋಯಿತು. 9,11,000 ರೂ. ಬೆಲೆ ಬಾಳುವ 1,564·25 ಟನ್ ಅಕ್ಕಿಯ ಬಗ್ಗೆ ಲೆಕ್ಕ ಸಿಕ್ಕಲಿಲ್ಲ.

"1957ರಲ್ಲಿ 1,43,600 ರೂ. ಬೆಲೆ ಬಾಳುವ 320·99 ಟನ್ ಗೋಧಿ ಕೆಟ್ಟು ಹೋಯಿತು. 65,100 ರೂ. ಬೆಲೆ ಬಾಳುವ 145 44 ಟನ್ ಗೋಧಿಯ ಬಗ್ಗೆ ಲೆಕ್ಕ ಸಿಕ್ಕಲಿಲ್ಲ. 1,84,900 ರೂ. ಬೆಲೆ ಬಾಳುವ 311·78 ಟನ್ ಅಕ್ಕಿ ಕೆಟ್ಟು ಹೋಯಿತು. 3,12,000 ರೂ. ಬೆಲೆ ಬಾಳುವ 526·53 ಟನ್ ಅಕ್ಕಿಯ ಬಗ್ಗೆ ಲೆಕ್ಕ ಸಿಕ್ಕಲಿಲ್ಲ".

ಹೀಗೆ ಎರಡು ವರ್ಷಗಳಲ್ಲಿ "ಕೆಟ್ಟು ಹೋದದ್ದು" ಮತ್ತು "ಲೆಕ್ಕ ಸಿಕ್ಕದ್ದು" ಒಟ್ಟು 3,111·39 ಟನ್ ಆಹಾರ ಧಾನ್ಯಗಳು ನಷ್ಟವಾದದ್ದು ಒಟ್ಟು ರೂಪಾಯಿ 17,37,100.

ಹಣ ಕೊಟ್ಟರೂ ಕಾಳು ಸಿಕ್ಕದ ಈ ದಿನಗಳಲ್ಲಿ ಹಣಪೋಲು ಮಾಡಿ ಕಾಳು ಕಾಣೆ ಮಾಡಿಕೊಳ್ಳುವ ಬುದ್ಧಿವಂತಿಕೆ ಭಾರತ ಸರಕಾರದ್ದು ! ಇದಕ್ಕೆ ನೀವೇನು ಹೇಳುತ್ತೀರಿ?

○ ○ ○

ಸೆಪ್ಟಂಬರ 24ರಂದು ಕೇರಳದ ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಮಂಗಳೂರಿಗೆ ಆಗಮಿಸಿದಾಗ ಅವರಿಗೆ ದೊರೆತ ಪ್ರಚಂಡ ಸ್ವಾಗತ ಮತ್ತು ನೆಹರೂರವರ ಹೊರತು ಯಾವ ಕಾಂಗ್ರೆಸ್ ನಾಯಕರೂ ಮಂಗಳೂರಿಗೆ ಬಂದಿದ್ದಾಗ ನೆರೆದಿದ್ದುದಕ್ಕಿಂತ ನೂರುಪಟ್ಟು ಹೆಚ್ಚು ಜನ ಸಂದಣಿ ಸೇರಿದ್ದ ಸಾರ್ವಜನಿಕ ಸಭೆ ಕಂಡು ಕೆಲವರ ಕಣ್ಣು ಕೋರೈಸಿ ಹೋಗಿದೆ !

ನಂಬೂದ್ರಿಪಾದರು ಬಂದು ಹೋದ ಎರಡನೇ ದಿನ ಮಂಗಳೂರಿಗೆ ಆಗುಮಿಸಿದ್ದ ನಿಜಲಿಂಗಪ್ಪನವರ ಸಾರ್ವಜನಿಕ ಸಭೆಯಲ್ಲಿ 250 ಜನರೂ ಸೇರಿದ್ದಿಲ್ಲ! ಯಾರೂ ಸೇರದಿರುತ್ತಿದ್ದರೆ ಹಿಂದೆ ಅಹಮದಾಬಾದಿನಲ್ಲಿ ಮೊರಾರ್ಜಿಯವರು "ಜನರಿಗೆ ಬುದ್ಧಿ ಕಲಿಸಲು" ಉಪವಾಸ ಹೂಡಿದಂತೆಯೇ ನಿಜಲಿಂಗಪ್ಪನವರೂ ಮಾಡುತ್ತಿದ್ದರೋ ಏನೋ? ನಂಬೂದ್ರಿಪಾದರ (ಕಮ್ಯೂನಿಸ್ಟ್ ಪಾರ್ಟಿ) ಸಭೆಯಲ್ಲಿ 30,000 ಜನ ಸೇರಿದಾಗ ನಿಜಲಿಂಗಪ್ಪನವರ (ಕಾಂಗ್ರೆಸ್ಸಿನ) ಸಭೆಯಲ್ಲಿ 300 ಜನರಾದರೂ ಇಲ್ಲದಿದ್ದರೆ ಮಾನ್ಯ ಮಾಜಿ (ಜನಪ್ರಿಯ!) ಮುಖ್ಯ ಮಂತ್ರಿಗಳಿಗೆ ಸಿಟ್ಟು ಬಾರದಿರುವುದೆ? ಸಿಟ್ಟಿನ ಭರದಲ್ಲಿ ಅವರು ಅಪ್ಪಣೆ ಕೊಡಿಸಿದರು! "ಕುರುಚಲು ಗಿಡಗಳಂದ ಸಾರ ಹೀರಿ ಬೆಳೆಯುವ ಗಂಧದ ಮರದಂತೆ, ಅವಿದ್ಯಾವಂತ ಕಾರ್ಮಿಕರ ಶೋಷಣೆಯಿಂದ ಕಮ್ಯೂನಿಸ್ಟರು ಬೆಳೆಯುತ್ತಾರೆ ....ಆದ್ದರಿಂದ ಕಾರ್ಮಿಕರು ಮಲೆನಾಡಿನ ಕಾಡುಗಳಲ್ಲಿ ಸ್ವತಂತ್ರವಾಗಿ ಬೆಳೆಯುವ ಬೆಳೆಯುವ ಮರಗಳಂತಿರಬೇಕು, ಕುರುಚಲು ಗಿಡಗಳಾಗಬಾರದು"!

ನಮ್ಮ ಮಲೆನಾಡಿನಲ್ಲಿ ಸ್ವತಂತ್ರವಾಗಿ ಬೆಳೆಯುವ ಮರಗಳನ್ನು ಮಾತ್ರವಲ್ಲ, ಕಾದಿಟ್ಟ ಕಾಡುಗಳ "ನಂಬರು" ಹಾಕಿದ ಮರಗಳನ್ನು ಕೂಡ ಪರ್ಮಿಟ್ಟು ಇದ್ದೂ ಇಲ್ಲದೆಯೂ ಕಡಿದು ಮಾರುವುದೊಂದು ಕಾಂಗ್ರೆಸ್ ಪುಢಾರಿಗಳ "ಜನ್ಮಸಿದ್ಧ ಹಕ್ಕಾಗಿ" ನಡೆದುಬರುತ್ತಿದೆ. ರಾಜಕೀಯದಲ್ಲೂ ಹಾಗೆಯೆ. ಸ್ವಚ್ಛಂದವಾಗಿರುವ ಜನರನ್ನೆಲ್ಲ ಸುಲಿದು ತಿನ್ನುವುದು ಅವರ ಪರಿಪಾಠವಾಗಿದೆ. ಈ ಮಂಗಳೂರಿನ ಕಾರ್ಮಿಕರು ಅದಕ್ಕೆ ಅವಕಾಶ ಕೊಡದೆ ತಮ್ಮ ನಡುವೆ ಕಮ್ಯೂನಿಸ್ಟ್ 'ಗಂಧದ ಮರಗಳನ್ನು' ಸಾಕಿ ಬೆಳೆಸಿದ್ದಾರಲ್ಲಾ!— ಅವರಿಗೆ ನಿಜವಾಗಿ ಬುದ್ಧಿಯಿಲ್ಲ! ಒಣಗಿ ಉದುರಿದ ಬೇಲಿಯ ಮುಳ್ಳು ದಾರಿಹೋಕರ ಕಾಲಿಗೆ ಚುಚ್ಚುವಂತೆ ಮಂತ್ರಿ ಗದ್ದುಗೆಯಿಂದ ಉರುಳಿಬಿದ್ದ ನಿಜಲಿಂಗಪ್ಪನವರಿಗೆ ಕಮ್ಯೂನಿಸ್ಟರ ಕಾಲಿಗೆ ಕಡಿದಾದರೂ ನೋವು ಮಾಡೋಣವೆಂಬ ಹಾವ್ಯಾಸವೇನೊ? ತನ್ನ ಮೊನೆ ಮುರಿದರೂ ಚಿಂತಿಲ್ಲ, ಕಮ್ಯೂನಿಸ್ಟನ ಕಾಲು ನೋಯುವುದಲ್ಲಾ ಎಂಬ ಆತ್ಮಸಂತೋಷ ಅವರಿಗಾದರೆ ನಾವೇಕೆ ಚಿಂತಿಸಬೇಕು ?

ಅಂದಹಾಗೆ ಅಕ್ಟೋಬರ 1ರ "ತಾಯಿನಾಡು" ಒಂದು "ಎಕ್ಸ್‌ಪ್ರೆಸ್ ಲೆಟರ್" ಪ್ರಕಟಿಸಿದೆ :

"ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದಿರಿಪಾಡರು ಕೇಂದ್ರ ಮೈದಾನಿನಲ್ಲಿ

(೬ನೇ ಪುಟ ನೋಡಿ)

★

ನಮ್ಮ ನಗರ ಸಭೆ

ಸುತ್ತಿನ ಸಾವಿರ ಊರುಗಳ ಮಾದರಿ
ನಮ್ಮಯ ಊರಿನ ನರಕ ಸಭೆ–
ಅಲ್ಲಲ್ಲ—ತಪ್ಪಿದೆನು ನಗರಸಭೆ ! ॥ ಪಲ್ಲವಿ ॥

೧

ನಮ್ಮ ರಾಷ್ಟ್ರಪಿತ ಗಾಂಧಿಮಹಾತ್ಮನು
ಸಾರಿದಹಿಂಸೆಯ ಪಂಥವನು
ನಮ್ಮ ನಗರ ಸಭೆ ತುಳಿವುದೆಂಬುದಕೆ
ಕೇಳಿರೊಂದು ದೃಷ್ಟಾಂತವನು

೨

ಹಲವು ಜನರು ಹಲವೊಂದು ತೆರದಿ ಮಾ–
ತಾಡಿ ಆವನ ತಲೆ ಕುಕ್ಕಿದರು
'ಚಿಲ್ಲರೆ ವಿಷಯವ ಚರ್ಚೆಗೆ ತರುವುದೆ?'
ಎನುತ ಕೆಲರುರಿದ. ಮುಕ್ಕಿದರು

೩

ಸಂತೆ ಗದ್ದಲದ ಸಭೆಯ ಮಧ್ಯದಲಿ
ಸದ್ದು ಮಾಡದೆಯೆ ಈವರೆಗು
ಸುಮ್ಮನಿದ್ದ ಅಧ್ಯಕ್ಷ ಮಹಾಶಯ
ನುಡಿದನಿಂತು ಅವರೆಲ್ಲರಿಗು :

೪

"ಒಂದೆ-ಎರಡೆ ? ನೂರಾರು ದಾರಿಗಳು
ಸುಖವಿಲಾಸಕಿರೆ ಧನಿಕರಿಗೆ,
ಒಂದಾದರು ಇರಬೇಡವೆ ಹೇಳಿ
ನಮ್ಮೀ ಪಾಪದ ಬಡವರಿಗೆ ?"

೫

"ಸೊಳ್ಳೇರಾಯನ ಒಳ್ಳೇ ರಾಗವು
ಚಿಕ್ಕಾಡಮ್ಮನ ನರ್ತನವು
ಬಡವನ ಮನರಂಜನೆಯನು ಮಾಡಲಿ
ಎಂಬುದೆ ನಮ್ಮಯ ಆಶಯವು !"

೬

ಸೊಳ್ಳೆ ಹಾಗು ಚಿಕ್ಕಾಡು ಹೆಚ್ಚಿರಲು
ನಮ್ಮ ಊರಿನಲಿ ಒಂದು ಸಲ
ನಗರ ಸಭೆಯ ಬಡಸದಸ್ಯನೊಬ್ಬನು
ಚರ್ಚೆಗೆಂದನು ತಂದನಲ ;

೭

ಗಾಂಧಿವಾದಿಯೆಂದೆನ್ನಿಸಿಕೊಳ್ಳುವ
ಒಬ್ಬನೆದ್ದು ಕಿಡಿಕಾರಿದನು'
'ಹಿಂಸಾವಾದವ ಬೋಧಿಪ್ಪತುಂಟನ
ದಬ್ಬಿ'ರೆಂದು ಸಲೆ ಸಾರಿದನು

೮

"ಊರ ಜನರ ಹಿತವನ್ನು ಬಯಸುವುದೆ
ನಮ್ಮ ನಗರ ಸಭೆ ಮನೋರಥ
ಅದರಲಿಯೂ ಬಡಬಗ್ಗರದಲ್ಲದೆ
ಬಯಸಬೇಕು ಇನ್ನಾರ ಹಿತ ?

೯

"ಎಂದು ಯೋಚಿಸಿಯೆ ದಕ್ಷತೆ ವಹಿಸಿದೆ
ನಮ್ಮ ಮಾದರಿಯ ನಗರ ಸಭೆ
ಸೊಳ್ಳೆ ಹಾಗು ಚಿಕ್ಕಾಡು ಹೆಚ್ಚಿ ಬಡ–
ಜನಕೆ ತೋರಲಿಕೆ ಕಲಾಪ್ರಭೆ"

೧೦

ಎಂದು ತಮ್ಮ ಅಧ್ಯಕ್ಷ ನುಡಿದುದಕೆ
ಸಭೆಗೆ ಸಭೆಯೆ ಉಕ್ಕೇರಿದುದು ;
ಮೂಲೆಯೊಂದರಲಿ ಕುಳಿತ ಬಡವನಾ
ನೆಟ್ಟದಿಟ್ಟ ನೆಲಸೇರಿದುದು

—ಎಂ. ಅಕಬರ್ ಆಲಿ

ಷ್ಟು ಪ್ರಾಮುಖ್ಯತೆಯನ್ನು ಕೊಡಲಾಗಿದೆಯೋ ಅಷ್ಟೇ ಪ್ರಾಮುಖ್ಯತೆಯನ್ನು ವಿಶ್ರಾಂತಿಗೂ ರಷ್ಯದಲ್ಲಿ ಕೊಡಲಾಗಿದೆ.

ರಷ್ಯದಲ್ಲಿ ಮತೀಯ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿಲ್ಲ. ಬಹಳ ಕಮ್ಮಿ ಜನ ಇಗರ್ಜಿಗೆ ಹೋಗುತ್ತಾರೆ. ಅನೇಕ ದೊಡ್ಡ ಇಗರ್ಜಿಗಳು ಇಂದು ವಸ್ತುಸಂಗ್ರಹಾಲಯಗಳಾಗಿವೆ. ಅವರ ಮತ ವಿಜ್ಞಾನ ಮತ್ತು ವಿದ್ಯಾಭ್ಯಾಸ ಎಂದು ಹೇಳಬಹುದು.

ಸೋವಿಯತ್ ಜನರು ಬಹಳ ಔದಾರ್ಯ ಮನೋಭಾವದವರು. ನಮ್ಮನ್ನು ಬಹಳ ಆದರದಿಂದ ನೋಡಿಕೊಳ್ಳುತ್ತಿದ್ದರು. ಮಾಸ್ಕೋ ರೇಡಿಯೋದಲ್ಲಿ ನನಗೆ ಭಾಷಣ ಮಾಡಲಿಕ್ಕೆ ಕೇಳಿದರು. ಇಂಗ್ಲಿಷ್ ಭಾಷೆಯಲ್ಲಿ ಭಾಷಣ ಮಾಡುವುದು ನನಗೆ ಕಷ್ಟವೆಂದು ತಿಳಿಸಿ ತಮಿಳಿನಲ್ಲಿಯೇ ಭಾಷಣ ಮಾಡಿದೆ. ನನ್ನ ಭಾಷಣ ಸುಮಾರು ಆರು ಪುಟಗಳಷ್ಟಾಗುತ್ತಿತ್ತು. ಕೆಲವೇ ನಿಮಿಷಗಳಲ್ಲಿ ಅದನ್ನು ಇಂಗ್ಲಿಷ್ ಭಾಷೆಗೆ ಸಂಪೂರ್ಣವಾಗಿ ತರ್ಜುಮೆ ಮಾಡಲಾಗಿತ್ತು. ಇದು ನನಗೆ ತುಂಬಾ ಅಚ್ಚರಿ ಉಂಟುಮಾಡಿತು. ಅಷ್ಟೆ ಅಲ್ಲ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೊಬ್ಬರು ಬಂಗಾಳಿ ಭಾಷೆಯಲ್ಲಿ ಮಾತನಾಡಿಸಿ ನನ್ನನ್ನು ದಿಗ್ಭ್ರಮೆಗೊಳಿಸಿದರು. ಅವರು 13 ವರ್ಷಕಾಲ ಶಾಂತಿನಿಕೇತನದಲ್ಲಿದ್ದರಂತೆ !

ಸೋವಿಯತ್ ವೃತ್ತ ಪತ್ರಿಕೆಗಳು ಒಂದೇ ಒಂದು ಪುಟವಿರುತ್ತದೆ. ಹತ್ತು ನಿಮಿಷಗಳಲ್ಲಿ ಓದಬಹುದು. ವೃತ್ತಪತ್ರಿಕೆ ಕೊಳ್ಳಲಿಕ್ಕಾಗದವರಿಗಾಗಿ ಎಲ್ಲ ಪ್ರಮುಖ ರಸ್ತೆಗಳಲ್ಲಿಯೂ ಹಚ್ಚಿರುತ್ತಾರೆ.

ನಾವು ವಿಖ್ಯಾತವಾಗಿರುವ ಭವ್ಯವಾದ ಸೋವೆಟ್ಸ್‌ಕಾಯ ಹೋಟೆಲಿನಲ್ಲಿ ಉಳಿದು ಕೊಂಡಿದ್ದೆವು. ಅದು ಲೆನಿನ್-ಸ್ಟಾಲಿನ್ ಮೌಸೋಲಿಯಂನ ಸಮೀಪದಲ್ಲಿದೆ.

ಒಟ್ಟಿನಲ್ಲಿ ಸೋವಿಯತ್ ಯೂನಿಯನಿನಲ್ಲಿ ನನ್ನ ಪ್ರವಾಸದ ಅನುಭವ, ಭೆಟ್ಟಿಯಾದ ಮಿತ್ರರು ಇದರ ನೆನಪು ನನ್ನಲ್ಲಿ ಸದಾ ಕಾಲವೂ ಉಳಿದಿರುತ್ತದೆ. ಪ್ರವಾಸವು ನನ್ನ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿತೆಂದರೆ, ನನಗೆ ಅಲ್ಲಿಂದ ಹಿಂತಿರುಗಲು ಮನಸ್ಸೇ ಇರಲಿಲ್ಲ

———

ಹುರಿಗಾಳು

(ಕಾಯಿಸಾದು ಬಾತ್ಮೀದಾರರಿಂದ)

ಮಂಗಳೂರು, ಸೆಪ್ಟಂಬರ್, ೨೬

"ತನ್ನ ಸುತ್ತಲೂ ಬೆಳೆಯುವ ಕುರುಚಲು ಗಿಡಗಳಿಂದ ಸಾರವನ್ನು ಹೀರಿ ಪರಾವಲಂಬಿಯಾಗಿ ಬೆಳೆದ ಗಂಧದ ಮರದಂತೆಯೇ ಅವಿದ್ಯಾವಂತ ಕಾರ್ಮಿಕ ವರ್ಗದ ಬೆಂಬಲದಿಂದಾಗಿ ಶೋಭಿಸುವವರು ಕಮ್ಯೂನಿಸ್ಟ್ ಮುಖಂಡರೆಂದು ಶ್ರೀ ಎಸ್. ನಿಜಲಿಂಗಪ್ಪನವರು ಕಳೆದ ಶುಕ್ರವಾರ ಸಂಜೆ ಇಲ್ಲಿ ಒಂದು ಹೋಲಿಕೆಯಿತ್ತರು.

ಶ್ರೀ ನಿಜಲಿಂಗಪ್ಪನವರು ಕೇಂದ್ರ ಮೈದಾನಿನ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಿದ್ದರು.

—ಸುದ್ದಿ

೦ ೦ ೦

ಎಂಥ ಹೋಲಿಕೆ ! ಕಾರ್ಮಿಕವರ್ಗವನ್ನು ಅವಿದ್ಯಾವಂತರ ತಂಡ ಎಂದು ಅಲ್ಲಗೆಳೆಯುವ ನಿಜಲಿಂಗಪ್ಪನವರು ನಿಜವಾಗಿಯೂ ಬುದ್ಧಿವಂತರೆ ! ಏಕೆಂದರೆ ಕಾರ್ಮಿಕ ವರ್ಗ ನಿಜಲಿಂಗಪ್ಪನವರಂಥ ಕಾಂಗ್ರೆಸ್ ನಾಯಕರಿಂದ ಮೋಸಹೋಗಲಿಕ್ಕಿಲ್ಲ. ನಿಜಲಿಂಗಪ್ಪನವರಿಗಿಂತ ಅವರು ಎಷ್ಟೋ ಬುದ್ಧಿವಂತರಿದ್ದಾರೆ. ಇದು ನಿಜಲಿಂಗಪ್ಪನವರಿಗೆ ತಿಳಿಯಬೇಕಾಗಿದ್ದರೆ ಈಗಂತೂ ಸಾಧ್ಯವಿಲ್ಲ.

೦ ೦ ೦

ಕುರುಚಲು ಗಿಡಗಳಂತೆ ಸುತ್ತಲೂ ಅಧಿಕಾರ ದಾಹದಿಂದ ಬೆಳೆಯುತ್ತಿರುವ ಕಾಂಗ್ರೆಸ್ಸಿಗರ ತಂಡದ ನೆನಪು ನಿಜಲಿಂಗಪ್ಪನವರಿಗೆ ಮರೆತು ಹೋಗಿದೆಯೆ ? ಸ್ವಲ್ಪವೇ ಕಾಲದ ಹಿಂದೆ, ಖಾಲೀ ಕಾಗದದ ಮೇಲೆ ದಸ್ಕತ್ತು ಲಗತ್ತಿಸಿದ 'ವಿದ್ಯಾವಂತ' ಶಾಸನ ಸಭಾ ಸದಸ್ಯರಿಂದಲೇ ಅಲ್ಲವೇ ನಿಜಲಿಂಗಪ್ಪನವರು ಉರುಳಿದ್ದು ? ಅವರು ಸ್ವಲ್ಪ ಕೂಲಂಕುಶವಾಗಿ ಈಗಾಲಾದರೂ ಯೋಚಿಸಲಿ.

೦ ೦ ೦

ಕಮ್ಯೂನಿಸ್ಟ್ ಪಕ್ಷವನ್ನು ವಿರೋಧಿಸುವುದಿದ್ದರೆ, ಧಾರಾಳವಾಗಿ ಮಾಡಲು ನಿಜಲಿಂಗಪ್ಪನವರಿಗೆ ಹಕ್ಕು ಇದೆ. ಅದಕ್ಕೆ ಸರಿಯಾಗಿ ಪ್ರತ್ಯುತ್ತರವೂ ದೊರಕುತ್ತೆ. ಆದರೆ ಕಾರ್ಮಿಕವರ್ಗವನ್ನು 'ಅವಿದ್ಯಾವಂತರ ಕೂಟ' ಎಂದು ಹಳಿಯುವ ಗೋಜುಬೇಡ. ಆದರಿಂದ ನಿಮ್ಮ ಬುಡಕ್ಕೆ ಕೊಡಲೀ ಪೆಟ್ಟು ಬಿದ್ದೀತು. ಜೋಕೆ!

೦ ೦ ೦

ಏರ್ ಇಂಡಿಯ ಇಂಟರ್ ನ್ಯಾಶನಲ್ ಸಂಸ್ಥೆ ಕಳೆದ ವಾರ ಜಾಹೀರಾತೊಂದನ್ನು ಪ್ರಕಟಿಸಿದೆ. ಅದರಲ್ಲಿ ಮೊರಾರ್ಜಿಯವರ ಹಿಂದೆ ಸಂಸ್ಥೆಯ ನೌಕರ ಹಣದ ಮೂಟೆ ಹೊತ್ತು ತರುತ್ತಿರುವ ಒಂದು ವ್ಯಂಗ ಚಿತ್ರ ಪ್ರಕಟವಾಗಿದೆ. ಅದರ ಕೆಳಗೆ ಆಂಗ್ಲ ಭಾಷೆಯಲ್ಲಿ ಪುಟ್ಟ ಕವನವೊಂದಿದೆ.

ಅದು ಹೀಗಿದೆ :

ಮೊರಾರ್ಜಿ ಭಾಯ್, ಮೊರಾರ್ಜಿ ಭಾಯ್
ನೀವೇನು ತರುತ್ತೀರಿ ?
ಡಾಲರ್, ಡ್ಯೂಷೆಮಾರ್ಕ್, ಯೆನ್,
ಸ್ಟರ್ಲಿಂಗ್ ತರುತ್ತೇನೆ.
ಮೊರಾರ್ಜಿ ಭಾಯ್, ಮೊರಾರ್ಜಿ ಭಾಯ್
ನೀವು ಯಾವ ವಿಮಾನದಲ್ಲಿ
ಹೋಗುತ್ತೀರಿ ?
ಮೂರ್ಖ, ತಿಳಿಯದೆ ಏರ್ ಇಂಡಿಯಾ
ಇಂಟರ್ ನ್ಯಾಷನಲ್ ವಿಮಾನದಲ್ಲೇ !

೦ ೦ ೦

ಸರಕಾರಿ ಸಂಸ್ಥೆಯೊಂದು ತನ್ನ ಜಾಹೀರಾತಿಗಾಗಿ ಮಂತ್ರಿಗಳನ್ನು ಬಳಸುವುದು ಬಹಳ ಸೊಗಸಾಗಿದೆ. ಇದು ಸಂಸ್ಥೆಯ ಜಾಹೀರಾತಿನ "ಶ್ರೇಷ್ಠ"ತೆಯೇ ಇಲ್ಲ ಮಂತ್ರಿವರ್ಯರ "ಶ್ರೇಷ್ಠ"ತೆಯೇ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

೦ ೦ ೦

ಮೊರಾರ್ಜಿಯವರನ್ನೇ ಇದರ ಉತ್ತರ ಕೇಳಿ ಸಂಶಯ ನಿವಾರಣೆಗೆ ಯತ್ನಿಸುವುದು ಒಳ್ಳೆಯದು.

೦ ೦ ೦

ಜಯಪ್ರಕಾಶರು ಭಾರತಕ್ಕೆ ತಮ್ಮ ವಿದೇಶೀ ಪ್ರವಾಸದಿಂದ ಹಿಂತಿರುಗಿದ್ದಾರೆ. ನೆಹರೂ ನಂತರ ಯಾರು ? ಪ್ರಶ್ನೆಯನ್ನು ಹೊತ್ತು ತಂದಿದ್ದಾರೆ. ವಿದೇಶಗಳಲ್ಲಿ ಭೂದಾನ, ಸರ್ವೋದಯದ ಉಪದೇಶ ಮಾಡಿ 'ಜಯಭೇರಿ' ಹೊಡೆದ ಇವರು, ರಾಜಕೀಯದಿಂದ ದೂರವಿದ್ದುಕೊಂಡು ಭಾರತದಲ್ಲಿ ಹೊಸ ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ.

೦ ೦ ೦

ಭಾರತಕ್ಕೆ ಪ್ರಜಾಪ್ರಭುತ್ವ ಸಲ್ಲದು ಎಂದು ಒಂದು ಕಡೆ ಹೇಳಿದ್ದಾರೆ. ಇನ್ನೊಂದು ಕಡೆ ಪಕ್ಷಾತೀತವಾದ ಸರಕಾರ ಸ್ಥಾಪನೆಯಾಗಬೇಕು ಎಂದಿದ್ದಾರೆ. ಮತ್ತೊಂದು ಕಡೆ ಸರ್ವಪಕ್ಷಗಳೂ ಒಂದೆಡೆ ಕಲೆತು ಸಮಾಲೋಚಿಸಬೇಕು ಎಂದಿದ್ದಾರೆ.

೦ ೦ ೦

ಜಯಪ್ರಕಾಶರ ಒಂದೊಂದು ಹೇಳಿಕೆಗಳೂ ಹೊಸ ಹೊಸ ರಂಗನ್ನು ಕೊಡುತ್ತಿದೆ. ರಾಜಕೀಯದಿಂದ ದೂರವಿರುವ ಇವರ ವಿಚಾರಧಾರೆ ವಿಚಿತ್ರವಾಗಿರುವುದೇ ಅಲ್ಲದೆ ನಗೆಪಾಟಲಾಗುವಂತೆ ಇದೆ.

೦ ೦ ೦

ರಾಜಕೀಯವನ್ನು ಅದರ ಪಾಡಿಗೆ ಬಿಟ್ಟು, ಜಯಪ್ರಕಾಶರು ಭೂದಾನದಲ್ಲೇ ನಿರತರಾದರೆ ಕ್ಷೇಮವಲ್ಲವೇ ? ಈ ಪ್ರಶ್ನೆಗೆ ಅವರ ಉತ್ತರ: "ನೆಹರೂ ನಂತರ ...." ಎಂಬ ಉದ್ಗಾರ ಎತ್ತಲಾಗಿದೆ. ಅಂತೂ ಜಯಪ್ರಕಾಶರ "ಪ್ರಕಾಶ" ಹೇಗಿದ್ದರೂ ಪ್ರತಿಬಿಂಬಿಸುವಂತಿಲ್ಲ.

—ಚೌಚೌವಾಲ

★ ಕೇರಳ........ ★

ಕಾಂಗ್ರೆಸ್ಸಿಗೆ ಭದ್ರತೆಯಿಲ್ಲ!

ಕಾಂಗ್ರೆಸ್ ಅಧ್ಯಕ್ಷ ಧೇಬರ್ ಕೇರಳದಲ್ಲೆಲ್ಲ ಅಡ್ಡಾಡಿ ಕೊನೆಗೆ ತ್ರಿಚೂರು ಜಿಲ್ಲೆಗೆ ಬೊಟ್ಟು ಮಾಡಿ ಹೇಳಿದರು: "ನೋಡಿ ಇಲ್ಲಿ ಅಭದ್ರತೆಯಿದೆ!"

ಧೇಬರ್‌ರವರ ಈ ಮಾತೊಂದು ಸತ್ಯವಾಗಬೇಕೆ? ಇತ್ತೀಚೆಗೆ ತ್ರಿಚೂರು ಮುನಿಸಿಪಲ್ ಕೌನ್ಸಿಲಿಗೆ ಎರಡು ವಾರ್ಡುಗಳಿಂದ ಉಪಚುನಾವಣೆ ನಡೆಯಿತು. ಒಂದು ವಾರ್ಡಿನಲ್ಲಿ (ವಾರ್ಡ್ ನಂ. 20) ಕಾಂಗ್ರೆಸ್ ಉಮೇದುವಾರನ ವಿರುದ್ಧ ಒಬ್ಬ ಕಾರ್ಮಿಕ ನಾಯಕ (ನಿಜಲಿಂಗಪ್ಪನವರ ಭಾಷೆಯಲ್ಲಿ 'ಕುರುಚಲು ಗಿಡ') ಕಮ್ಯೂನಿಸ್ಟ್ ಪಾರ್ಟಿಯ ಉಮೇದ್ವಾರನಾಗಿ ಸ್ಪರ್ಧಿಸಿದ್ದರು. ಈತ ಪನಂಪಳ್ಳಿ ಗೋವಿಂದ ಮೇನೋನರ "ವಿಮೋಚನಾ ಸಮರ"ದ ರಣರಂಗವಾಗಿದ್ದ ಸೀತಾರಾಂ ಮಿಲ್ಲಿನ ಕೆಲಸಗಾರ!

ಮತ್ತೊಂದು ವಾರ್ಡ್‌ನಲ್ಲಿ [ವಾರ್ಡ್ ನಂ. 22] ಕಾಂಗ್ರೆಸ್ ಉಮೇದ್ವಾರನಾಗಿದ್ದುದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಸಹಕಾರ್ಯದರ್ಶಿ ಮತ್ತು ಪನಂಪಳ್ಳಿಯ 'ಸೀತಾರಾಂ ಲೇಬರ್ ಕಾಂಗ್ರೆಸ್'ನ ಉಪಾಧ್ಯಕ್ಷ!

ಈ ಎರಡು ವಾರ್ಡುಗಳ ಪೈಕಿ ಒಂದರಲ್ಲಿ ಹಿಂದೆ ಕಾಂಗ್ರೆಸ್ ಉಮೇದುವಾರರಾಗಿ ಆರಿಸಿ ಬಂದಿದ್ದರು. ಆದರೆ ಈ ಸಲ ಎರಡು ಕಡೆಗಳಲ್ಲೂ ಕಾಂಗ್ರೆಸ್ ಉಮೇದ್ವಾರರು ಎಗರಿ ಬಿದ್ದರು; ಕಮ್ಯೂನಿಸ್ಟ್ ಉಮೇದುವಾರರು ಆರಿಸಿ ಬಂದರು.

ಕೇರಳದಲ್ಲಿ ಜನರು ಕಮ್ಯೂನಿಸ್ಟ್ ಉಮೇದ್ವಾರರನ್ನೇ ಆರಿಸುವುದಾದರೆ ಕಾಂಗ್ರೆಸಿಗೆ ನಿಜವಾಗಿ ಅಭದ್ರತಾವಸ್ಥೆ ಉಂಟಾಗಿರುವುದರಲ್ಲಿ ಅನುಮಾನವಿಲ್ಲ.

ಆಹಾರ ಪರಿಸ್ಥಿತಿ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಕೇರಳ ಪ್ರಾಂತ ಸಮಿತಿಯು ಆ ರಾಜ್ಯದ ಆಹಾರ ಪರಿಸ್ಥಿತಿಯನ್ನು ಕುರಿತು ಅಂಗೀಕರಿಸಿರುವ ನಿರ್ಣಯವನ್ನು ಪೂರ್ತಿಯಾಗಿ ಓದುಗರ ಮುಂದಿಡುತ್ತೇವೆ. ಅದು ಅಲ್ಲಿನ ಆಹಾರದ ಸಮಸ್ಯೆಯನ್ನು ಮಾತ್ರವಲ್ಲ, ಕೇಂದ್ರ ಸರಕಾರವು ಆ ರಾಜ್ಯದ ಬಗ್ಗೆ ತಾಳಿರುವ ಪಕ್ಷಪಾತ ನೀತಿಯನ್ನೂ ಬಹಿರಂಗ ಪಡಿಸುತ್ತದೆ.

"ಕೇರಳದಲ್ಲಿ ಕಳೆದ ಎರಡು ವಾರಗಳಲ್ಲಿ ಅಕ್ಕಿಯ ಕ್ರಯ ಕ್ರಮೇಣ ಏರುತ್ತಿದ್ದು ಜನರಿಗೆ ಕಷ್ಟವಾಗಿದೆ...

ಸದ್ಯ ಇಡೀ ದೇಶವೇ ತೀವ್ರವಾದ ಆಹಾರ ಬಿಕ್ಕಟ್ಟಿಗೆ ಸಿಲುಕಿಕೊಂಡಿದೆ. ಕೇರಳವು ಆಹಾರದ ಮಟ್ಟಿಗೆ ಯಾವಾಗಲೂ ಕೊರತೆಯಿರುವ ಪ್ರಾಂತವಾಗಿದೆ. ಇಲ್ಲಿ ಅವಶ್ಯವಿರುವುದರ ಅರ್ಧಾಂಶದಷ್ಟು ಮಾತ್ರ ಉತ್ಪಾದನೆಯಾಗುತ್ತದೆ. ಆದುದರಿಂದ ಈ ರಾಜ್ಯವು ಯಾವಾಗಲೂ ದೇಶದ ಇತರ ಭಾಗಗಳಿಂದಲೋ ವಿದೇಶಗಳಿಂದಲೋ ಆಮದಾಗುವ ಅಕ್ಕಿಯನ್ನೇ ಬಹಳ ಮಟ್ಟಿಗೆ ಹೊಂದಿಕೊಂಡಿರುತ್ತದೆ. ಅಕ್ಕಿಯ ಕ್ರಯ ಮಿತಿಮೀರಿ ಏರದಂತೆ ತಡೆಯುವ ಉದ್ದೇಶದಿಂದ ಪ್ರಾಂತ ಸರಕಾರವು ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಕನಿಷ್ಟ ಪ್ರಮಾಣದಲ್ಲಿ ಅಕ್ಕಿಯನ್ನು ಹಂಚುತ್ತ ಬಂದಿದೆ. ಕೇಂದ್ರ ಸರಕಾರವು ಅಕ್ಕಿಯ ಬಗ್ಗೆ ದಕ್ಷಿಣ ವಲಯವನ್ನು ರಚಿಸುವ ತನಕ ಕೇರಳಕ್ಕೆ ಅವಶ್ಯವಿದ್ದ ಅಕ್ಕಿಯನ್ನು ಒದಗಿಸುತ್ತಿತ್ತು. ಉದಾಹರಣೆಗೆ 1957 ಜನವರಿಯಿಂದ ಮೇ ತನಕ ಕೇಂದ್ರವು ತಿಂಗಳಿಗೆ 26,000 ಟನ್ ಅಕ್ಕಿಯನ್ನು ಕೇರಳಕ್ಕೆ ಒದಗಿಸುತ್ತಿತ್ತು. ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ 25,000 ಟನ್ ಮತ್ತು ಆಗಸ್ಟ್‌ನಲ್ಲಿ 30,000 ಟನ್ ಕೇಂದ್ರದಿಂದ ದೊರೆತಿದೆ. ಹೀಗೆ ಕೇಂದ್ರದಿಂದ ದೊರೆತ ಅಕ್ಕಿಯನ್ನೆಲ್ಲ ಕೇರಳದಲ್ಲಿ 6000 ನ್ಯಾಯ ಬೆಲೆಯ ಅಂಗಡಿ ಮೂಲಕ, ಹೆಚ್ಚೇನೂ ಆಕ್ಷೇಪಗಳಿಗೆ ಕಾರಣವಾಗದಂತೆ, ಸರಕಾರ ವಿತರಣೆ ಮಾಡಿದೆ.

1957ರಲ್ಲಿ ಆಂಧ್ರ, ಮೈಸೂರು, ಮದ್ರಾಸ್ ಮತ್ತು ಕೇರಳ ರಾಜ್ಯಗಳನ್ನು ಸೇರಿಸಿ ದಕ್ಷಿಣ ಆಹಾರ ವಲಯ ರಚಿಸಲ್ಪಟ್ಟಿತು. ಅದಾದ ನಂತರ, ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಹಂಚಲು ಬೇಕಾದ ಅಕ್ಕಿಯನ್ನು ಪೂರೈಸಿಕೊಳ್ಳಲು ಕೇರಳ ಸರಕಾರಕ್ಕೆ ಹೆಚ್ಚು ಹೆಚ್ಚು ಕಷ್ಟವಾಗುತ್ತಿದೆ. ಆಂಧ್ರದಲ್ಲಿ 8 ಲಕ್ಷ ಟನ್ ಅಕ್ಕಿ ಉಳಿತಾಯವಿದೆಯೆಂದು ಕೇಂದ್ರ ಸರಕಾರ ಅಂದಾಜು ಮಾಡಿದೆ. ಅದೇ ಸಮಯದಲ್ಲಿ ಮದ್ರಾಸಿನಲ್ಲಿ 1 ಲಕ್ಷ ಟನ್, ಮೈಸೂರಿನಲ್ಲಿ 50 ಸಾವಿರ ಟನ್ ಮತ್ತು ಕೇರಳದಲ್ಲಿ 7 ಲಕ್ಷ ಟನ್ ಕೊರತೆಯಿದೆಯೆಂದೂ ಅಂದಾಜು ಮಾಡಲಾಗಿತ್ತು. ಆದ್ದರಿಂದ ದಕ್ಷಿಣ ವಲಯದೊಳಗಿನ ಪ್ರಾಂತಗಳ ಕೊರತೆಯನ್ನು ಆಂಧ್ರದಿಂದ ಭರ್ತಿಮಾಡಿಕೊಳ್ಳಬಹುದೆಂದು ಎಣಿಸಲಾಗಿತ್ತು. ಈ ಆಧಾರದಲ್ಲಿ ಕೇಂದ್ರ ಸರ್ಕಾರವು ಕೇರಳಕ್ಕೆ ಒದಗಿಸುತ್ತಿದ್ದ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡ ತೊಡಗಿತು. 1957 ಸೆಪ್ಟಂಬರದಿಂದ ದಶಂಬರದವರೆಗೆ ಕೇಂದ್ರದಿಂದ ಕೇರಳಕ್ಕೆ ತಿಂಗಳಾ 10,000 ಟನ್ ಮಾತ್ರ ಒದಗಿತು. 1958 ಜನವರಿಯಲ್ಲಿ ಅದು ಬರೇ 5000 ಟನ್‌ಗೆ ಕಡಿತವಾಯಿತು. 1958 ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಕೇರಳಕ್ಕೆ ಕೇಂದ್ರದಿಂದ ಒಂದೇ ಒಂದು ಕಾಳು ಅಕ್ಕಿಯೂ ಸಿಗಲಿಲ್ಲ. ಕೊರತೆ ಅತ್ಯಂತ ತೀವ್ರವಾಗುವ ಮೇ, ಜೂನ್, ಜುಲೈ ತಿಂಗಳುಗಳಿಗೆ—ಕೇರಳ ಸರಕಾರದ ಒತ್ತಾಯದ ಪರಿಣಾಮವಾಗಿ—12,000 ಟನ್‌ಗಳ ಪ್ರಕಾರ ಸಿಕ್ಕಿತು, ತಿರುಗಿ ದೇಶದಲ್ಲೆಲ್ಲ ಆಹಾರದ ಸಮಸ್ಯೆಯು ತೀರ ಹದಗೆಟ್ಟು, ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಕೇರಳಕ್ಕೆ ಕೇಂದ್ರದಿಂದ ಅಕ್ಕಿ ಸಿಗಲೇ ಇಲ್ಲ.

ಇದೇ ಸಮಯದಲ್ಲಿ ಕೇಂದ್ರ ಸರಕಾರದಿಂದ ಕೇರಳ ಸರಕಾರವು 24,000 ಟನ್ ಅಕ್ಕಿಯನ್ನು ಸಾಲವಾಗಿ ಪಡೆದುಕೊಂಡಿತ್ತು. ಅದನ್ನು ಕೂಡಲೇ ಹಿಂತಿರುಗಿ ಕೊಡಬೇಕೆಂದು ಕೇಂದ್ರವು ಕೇರಳ ಸರಕಾರವನ್ನೀಗ ನಿರ್ಬಂಧಿಸುತ್ತಿದೆ. ಅದರಲ್ಲಿ 6000 ಟನ್ ಕೇಂದ್ರಕ್ಕೆ ಈಗಾಗಲೆ ಹಿಂತಿರುಗಿ ಕೊಡಲಾಗಿದೆಯೆಂದು ತಿಳಿದು ಬಂದಿದೆ. ಅಂತೂ ಸೆಪ್ಟಂಬರದಲ್ಲಿ ಕೇಂದ್ರದಿಂದ ಅಕ್ಕಿ ಸಿಗದ್ದರಿಂದಲೂ ಬೇರೆ ಕಡೆಯಿಂದ ಕೊಂಡುಕೊಳ್ಳಲು ಸಾಧ್ಯವಿಲ್ಲದ್ದರಿಂದಲೂ ಕೇರಳದಲ್ಲಿ ನ್ಯಾಯ ಬೆಲೆಯ ಅಂಗಡಿಗಳಿಗೆ ಅಕ್ಕಿಯನ್ನು ಪೂರೈಸಲು ಸಾಧ್ಯವಾಗದೆ ಹೋಗುತ್ತಿದೆ. ಇದರಿಂದ ಅಕ್ಕಿಯ ಬೆಲೆ ಕ್ರಮೇಣ ಏರುವಂತಾಗಿದೆ.

ಆಂಧ್ರದಿಂದ ಅಕ್ಕಿಯನ್ನು ಕೊಂಡುಕೊಳ್ಳಲು ಕೇರಳ ಸರಕಾರಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ? ಕೇರಳ ಸರಕಾರವು ಆಂಧ್ರದಿಂದ ಅಕ್ಕಿ ಕೊಂಡುಕೊಳ್ಳಲು ಕಳೆದ ಆರು ತಿಂಗಳುಗಳಿಂದ ಪ್ರಯತ್ನ ಮಾಡುತ್ತಿದೆ. ಆದರೆ ಆಂಧ್ರದ ಉಳಿತಾಯ ಜಿಲ್ಲೆಗಳಾದ ಕೃಷ್ಣ, ಪೂರ್ವ ಮತ್ತು ಪಶ್ಚಿಮ ಗೋದಾವರಿ ಹಾಗು ಗುಂಟೂರು ಜಿಲ್ಲೆಗಳಲ್ಲಿ ಕೇಂದ್ರ ಸರಕಾರವು ಅಕ್ಕಿಯ ಬೆಲೆಯನ್ನು ನಿಯಂತ್ರಣ ಮಾಡಿದೆ. ಈ ಜಿಲ್ಲೆಗಳಲ್ಲಿ ಬಹಿರಂಗ ಮಾರುಕಟ್ಟೆಗಳಲ್ಲಿ ಕಂಟ್ರೋಲ್ ದರದಲ್ಲಿ ಅಕ್ಕಿ ಸಿಕ್ಕುವುದಿಲ್ಲ. ಕೇಂದ್ರ ಸರಕಾರ ನಿಶ್ಚಯಿಸಿರುವ ಬೆಲೆಗಿಂತ ಹೆಚ್ಚು ಕೊಟ್ಟು ಅಕ್ಕಿಯನ್ನು ಕೊಂಡುಕೊಳ್ಳುವುದು ಕಾನೂನಿಗೆ ವಿರೋಧವಾಗುತ್ತದೆ. ಬೇಕಾದರೆ ಬೇರೆ ಜಿಲ್ಲೆಗಳಿಂದ ಕೇರಳ ಸರಕಾರ ಅಕ್ಕಿ ಕೊಂಡುಕೊಳ್ಳಲಿ ಎಂದು ಕೇಂದ್ರ ಸರಕಾರ ಎಣಿಸುತ್ತಿದೆ. ಅದೇ ಸಮಯದಲ್ಲಿ ದಕ್ಷಿಣ ವಲಯವಾದ ನಂತರ ಆಂಧ್ರದಿಂದ ಕೇಂದ್ರ ಸರಕಾರ 3 ಲಕ್ಷ ಟನ್ ಅಕ್ಕಿ ಕೊಂಡುಕೊಂಡಿದೆ. ಅದರಲ್ಲಿ ಹೆಚ್ಚಿನ ಅಂಶವನ್ನು ದಕ್ಷಿಣ ವಲಯದ ಹೊರಗೆ ಒಯ್ಯಲಾಗಿದೆ. ಅದಲ್ಲದೆ ಆಂಧ್ರದಿಂದ ಕಳ್ಳಗಂಡೆಯ ಮೂಲಕ ದಕ್ಷಿಣ ವಲಯದ ಹೊರಗಿನ ಮುಂಬಯಿ ಪ್ರಾಂತಕ್ಕೂ ಅಕ್ಕಿ ಸಾಗುತ್ತಿದೆ. ಇದನ್ನು ಲೋಕಸಭೆಯಲ್ಲಿ ಆಹಾರ ಸಚಿವರೇ ಒಪ್ಪಿಕೊಂಡಿದ್ದಾರೆ. ಕೇರಳದ ಕೊರತೆಯನ್ನು ನೀಗಾಡಿಸಲಿಕ್ಕೆಂದು ರಚಿಸಲ್ಪಟ್ಟ ದಕ್ಷಿಣ ಆಹಾರ ವಲಯವು ಪ್ರಯೋಗದಲ್ಲಿ ಕೇರಳಕ್ಕೆ ಅಕ್ಕಿ ಸಿಗದಂತೆ ಮಾಡುವ ವ್ಯವಸ್ಥೆಯಾಗಿ ಪರಿಣಮಿಸಿದೆ. ಇದಕ್ಕೆ ಕೇಂದ್ರ ಸರಕಾರದ ಧೋರಣೆಗಳೇ ಕಾರಣ.

ಕೇರಳವು ನಮ್ಮ ದೇಶದಲ್ಲೇ ಅತ್ಯಂತ ಆಹಾರ ಕೊರತೆಯುರುವ ರಾಜ್ಯ. ಆದಕ್ಕೆ ಆಹಾರ ಧಾನ್ಯವನ್ನು ಒದಗಿಸುವ ಜವಾಬ್ದಾರಿಯನ್ನು ಕೇಂದ್ರ ಸರಕಾರ ಕೈ ಬಿಡಬಾರದೆಂದು ನಾವು ಎಚ್ಚರಿಸುತ್ತೇವೆ. ಕೇರಳಕ್ಕೆ ತಿಂಗಳಿಗೆ 24,000 ಟನ್ ಅಕ್ಕಿಯನ್ನು (ನ್ಯಾಯ ಬೆಲೆಯ ಅಂಗಡಿಗಳಲ್ಲಿ ಹಂಚಲು) ಒದಗಿಸಬೇಕೆಂದು ನಾವು ಕೇಂದ್ರ ಸರಕಾರವನ್ನು ಒತ್ತಾಯ ಮಾಡುತ್ತೇವೆ.

o o o

ನಿರುದ್ಯೋಗ ನಿವಾರಣೆ ಯತ್ನದಲ್ಲಿ ಕೇರಳ 17 ತಿಂಗಳಲ್ಲಿ

10,000 ಮಂದಿಗೆ ಕೆಲಸ

ಕೇರಳದಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರದ ಆಡಳಿತೆಯ ಹದಿನೇಳು ತಿಂಗಳಲ್ಲಿ ಸಾರ್ವಜನಿಕ ಕ್ಷೇತ್ರದ ಯೋಜನೆಗಳಲ್ಲಿ 10,000 ಮಂದಿಗೆ ಉದ್ಯೋಗ ದೊರಕಿಸಿ ಕೊಡಲಾಗಿದೆ ಎಂದು ಸರಕಾರೀ ಪ್ರಕಟಣೆಯೊಂದು ತಿಳಿಸಿದೆ.

ಇದರಲ್ಲಿ 1000 ಮಂದಿಗೆ ಬೃಹತ್ ಕೈಗಾರಿಕೆಗಳಲ್ಲೂ, ಮತ್ತು 2000 ಮಂದಿ ಸಣ್ಣ ಕೈಗಾರಿಕೆಗಳಲ್ಲೂ 1900 ಮಂದಿ ಖಾದಿ ಉದ್ಯಮದಲ್ಲಿಯೂ ಮತ್ತು 5100 ಮಂದಿ ಗ್ರಾಮಾಂತರ ಕೈಗಾರಿಕೆಗಳಲ್ಲೂ ಉದ್ಯೋಗ ಪಡೆದಿದ್ದಾರೆ. ಮುಂದೆ ಕೆಲವು ತಿಂಗಳುಗಳಲ್ಲಿ ಸ್ಥಾಪಿತವಾಗಲಿರುವ ಎರಡ ಹತ್ತಿ ಗಿರಣಿಗಳು, ರೆಯಾನ್ ಪಲ್ಪ್ ಕಾರ್ಖಾನೆ, ಗಟ್ಟಿ ಬೋರ್ಡ್ ತಯಾರಿಕೆ ಕಾರ್ಖಾನೆ, ಹಂಚು, ಆಟೋಮೊಬೈಲ್ ಟೈರ್ ಮತ್ತು ಸೈಕಲ್ ಕಾರ್ಖಾನೆ ಹಾಗೂ ಅಂಬರಚರ್ಖಾ ಪರಿಶ್ರಮಾಲಯಗಳು ಸುಮಾರು 27,000 ಮಂದಿಗೆ ಉದ್ಯೋಗ ದೊರಕುವುದೆಂದು ಅಂದಾಜು ಮಾಡಲಾಗಿದೆ.

ನೀವೇನು ಹೇಳುತ್ತೀರಿ?

(೪ನೇ ಪುಟದಿಂದ)

(ಮಂಗಳೂರು) ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಿರ್ಮಿಸಲಾಗಿದ್ದ ಬಹಿರಂಗ ಸಭಾ ವೇದಿಕೆಯಲ್ಲಿ ಸೆ. ೨೪ರಂದು ಸಂಜೆ ಕುಳಿತಿದ್ದು ಭಾಷಣಕ್ಕೆ ಸನ್ನದ್ಧರಾಗುತ್ತಿದ್ದರು.

"ಆಗತಾನೇ ಅವರಿಗೆ ಒಂದು 'ಎಕ್ಸ್‌ಪ್ರೆಸ್ ಲೆಟರ್' ಟಪ್ಪಾಲ್ ಮೂಲಕ ತಲುಪಿತು.

ಶ್ರೀ ನಂಬೂದರಿಪಾಡ್ ಅವರು ಲಕ್ಕೋಟೆಯನ್ನು ಕುತೂಹಲದಿಂದ ಒಡೆದು ನೋಡಿದರು.

"(Religion in danger) ಧರ್ಮಕ್ಕೆ ಗಂಡಾಂತರ ಬಂದಿದೆ" ಎಂದು ಪತ್ರದಲ್ಲಿ ಬರೆಯಲಾಗಿತ್ತು.

ಇದ್ದರೂ ಇರಬಹುದೆನ್ನಿ! ಕೆಲವೇ ದಿನಗಳ ಹಿಂದೆ ತಲೆತಿರುಕನೊಬ್ಬ ಇಗರ್ಜಿಯೊಂದರ ಮೇಲೆ ಹತ್ತಿ ಕ್ರೂಜೆಯನ್ನು ಕಿತ್ತುದನ್ನು ನೆಪವಾಗಿ ಮಾಡಿಕೊಂಡು ಇಲ್ಲಿನ ಕೆಲವು "ಧರ್ಮಾವತಾರಿಗಳು" ಗಂಟಲು ಬಿರಿಯುವಷ್ಟು ಕಿರಿಚಿಕೊಂಡಿದ್ದರು. ತಿರುವಾಂಕೂರು—ಕೊಚ್ಚಿಯ ಇಗರ್ಜಿಗಳೂ, ವಯನಾಡ್, ವಲುವನಾಡ್, ಪೊನ್ನಾನಿ ತಾಲೂಕುಗಳ ಮಸೀದಿಗಳೂ ತಿರುವನಂತಪುರದ ಮತ್ತು ಗುರುವಾಯೂರಿನ ಪ್ರಸಿದ್ಧ ದೇವಾಲಯಗಳೂ ಕೇರಳದಲ್ಲಿ ಸುರಕ್ಷಿತವಾಗಿವೆ ಎಂದ ಮೇಲೆ ಈ "ಧರ್ಮಾವತಾರಿಗಳ" ಧರ್ಮಕ್ಕೆ ಗಂಡಾಂತರ ಬಂದಂತಲ್ಲವೆ? ಸಬರಿಮಲೆಯಲ್ಲಿ ಶಾಸ್ತಾವು ದೇವಾಲಯವನ್ನು ಕೆಡವಿದವರು "ದೇವರಿಲ್ಲದ ಕಮ್ಯೂನಿಸ್ಟರು" ಅಲ್ಲ, ಈ "ಧರ್ಮಾವತಾರಿಗಳ" ಬಳಗಕ್ಕೆ ಸೇರಿದವರು ಎಂದು ತನಿಖೆಯಿಂದ ಕಂಡು ಬಂದಿರುವುದನ್ನು ನಂಬೂದ್ರಿಪಾದ್ ಸರಕಾರ ಬಹಿರಂಗಪಡಿಸಿದ್ದೂ "ಧರ್ಮಕ್ಕೆ ಗಂಡಾಂತರ" ಅಲ್ಲವೆ? ನೀವೇ ಹೇಳಿ!

—ಪ್ರಶ್ನಾರ್ಥಿ

ಕೆ. ಪಿ. ಟಿ. ಯು. ಸಿ. ಯ ಮನವಿ

(೩ನೇ ಪುಟದಿಂದ)

ಗೊಳಿಸಬೇಕೆಂದು ಮತ್ತು ಸಂಘಟಿತ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಭೆಯನ್ನು ಕರೆದು, ಅವರ ಅಭಿಪ್ರಾಯವನ್ನು ತಿಳಿದು ಒಂದೇ ತರದ ಕಾರ್ಮಿಕ ಕಾಯಿದೆಗಳನ್ನು ಮಾಡಲು ಮುಂದೆ ಬರಬೇಕೆಂದು ಒತ್ತಾಯಪಡಿಸುತ್ತದೆ.

5. ಕೆ. ಪಿ. ಟಿ. ಯು. ಸಿ. ಮುಂದಾಳುಗಳಾದ ಕೆ. ಎಸ್. ವಾಸನ್, ಎಂ. ಸಿ. ನರಸಿಂಹನ್ (ಎಂ. ಎಲ್. ಎ.) ಎಸ್. ಸೂರ್ಯನಾರಾಯಣ ರಾವ್, ಎಸ್. ಜಿ. ಜಯರಾಂ, ಎಂ. ಎನ್. ಉಗ್ರಪ್ಪ, ಎಂ. ವಿ. ಭಾಸ್ಕರ್ ಮತ್ತು ಎಂ. ಎಸ್. ರಾಮ ರಾವ್‌ರವರುಗಳ ಒಂದು ನಿಯೋಗವು ಕೈಗಾರಿಕಾ ಮಂತ್ರಿಗಳನ್ನು ಕಂಡು ಒಂದು ಮನವಿಯನ್ನು ಸಲ್ಲಿಸಿ, ಚಂದ್ರಾ ಮತ್ತು ಕೃಷ್ಣಾ ಮಿಲ್ಲ್ ಕೆಲಸಗಾರರ ಮತ್ತು ಹಟ್ಟಿ ಚಿನ್ನದ ಗಣಿ ಕೆಲಸಗಾರರ ವಿವಾದಗಳನ್ನು ಸರಕಾರವು ಕೂಡಲೇ ಬಗೆಹರಿಸಬೇಕೆಂದು ತಿಳಿಸಲಾಯಿತು.

ಪ್ರಾಂತೀಯ ಸುದ್ದಿ ಸಂಗ್ರಹ

ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗೆ ಬೆಂಬಲ

ಕೋಲಾರ ಚಿನ್ನದ ಗಣಿ ಕಾರ್ಮಿಕರು

ತಾ. 6—10—58ರಂದು ಕೋಲಾರದ ಚಿನ್ನದ ಗಣಿಯ 15,000 ಕಾರ್ಮಿಕರ ಸಭೆಯಲ್ಲಿ, ಹಟ್ಟಿ ಕಾರ್ಮಿಕರಿಗೆ ಬೆಂಬಲ ನೀಡುವ ನಿರ್ಣಯವನ್ನು ಸ್ವೀಕರಿಸಲಾಯಿತು. ಕಾರ್ಮಿಕ ಸಂಘಗಳ ಇಬ್ಬರು ಉಪಾಧ್ಯಕ್ಷರುಗಳಾದ ಕಾ|| ಎಸ್. ರಾಜಗೋಪಾಲ್ ಮತ್ತು ತವಮಣಿ—ಇವರನ್ನು ಹಟ್ಟಿಗೆ ಕಳುಹಿಸಲು ನಿರ್ಧರಿಸಲಾಗಿದೆ. 100 ರೂ. ಸಹಾಯ ಧನವನ್ನು ಕಳುಹಿಸಬೇಕೆಂದೂ ನಿರ್ಧರಿಸಲಾಯಿತು.

ಹರಿಹರ ಕಿರ್ಲೋಸ್ಕರ ಕೆಲಸಗಾರರು

ಹರಿಹರ ಕಿರ್ಲೋಸ್ಕರ ಕಂಪೆನಿ ಸಂಘ ಕಾರ್ಯಕಾರಿ ಸಮಿತಿಯ ಸಭೆಯು ತಾ. 26-9-58ರಂದು ಸಭೆಸೇರಿದ್ದು, ಮುಷ್ಕರ ಹೋರಾಟ ನಡೆಸುತ್ತಿರುವ ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗೆ ಬೆಂಬಲ ಸೂಚಕವಾಗಿ 25 ರೂ.ಗಳನ್ನು ಕಳಿಸಿದ್ದಾರೆ.

ಹರಿಹರದಲ್ಲಿ ಕಿರ್ಲೋಸ್ಕರ್ ಕಂಪೆನಿಯ ಕಾರ್ಮಿಕರ ಸಭೆ 6—10—58ರಂದು ನಡೆಯಿತು. ಹಟ್ಟಿ ಕಾರ್ಮಿಕರಿಗೂ ಮತ್ತು ಚಂದ್ರಾ ಮಿಲ್ ಹಾಗೂ ಕೃಷ್ಣ ಮಿಲ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು. ಸಹಾಯಧನ ವಸೂಲಿಸಲು ನಿರ್ಧಾರ ಮಾಡಲಾಯಿತು.

ರಾಯಚೂರು ವೀರಾಪುರ ಗ್ರಾಮದ ರೈತರು

ದಿನಾಂಕ ೧—೧೦—೫೮ರ ಬುಧವಾರ ಸಾಯಂಕಾಲ ವೀರಾಪೂರ ಗ್ರಾಮದಲ್ಲಿ ಊರಿನ ಎಲ್ಲ ೬೦—೭೦ ರೈತ ಜನರು ಇಲ್ಲಿಯ ಸುಪ್ರಸಿದ್ಧ ಬೇಸಾಯಗಾರರಾದ ಪರಮಣ್ಣಕೋಟೆ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಹಟ್ಟಿ ಚಿನ್ನದ ಗಣಿಯ ಕಾರ್ಮಿಕರ ನ್ಯಾಯವಾದ ಬೇಡಿಕೆಗಳಿಗೆ ತಮ್ಮ ಪೂರ್ಣ ಬೆಂಬಲ ವ್ಯಕ್ತಪಡಿಸಿದರು. ೨೦ ೨೧ ದಿವಸಗಳಿಂದ ಶಾಂತ ಮತ್ತು ನಿಯಮಬದ್ಧ ರೀತಿಗಳಿಂದ ಸಂಪನ್ನು ಮುಂದುವರಿಸಿದ್ದಕ್ಕಾಗಿ ಎಲ್ಲರ ಧನ್ಯವಾದಗಳನ್ನು ಅರ್ಪಿಸಿದರು. ಇಷ್ಟಾದರೂ ಸರಕಾರ ಈ ವರೆಗೆ ತಳೆದಿರುವ ಅನಾದರಣೆ ಮತ್ತು ಕಂಪೆನಿಯ ಆಡಳಿತಗಾರರ ಈ ಧೋರಣೆಗಳನ್ನು ಕಟುವಾಗಿ ಟೀಕಿಸಿ, ಎಲ್ಲರಿಂದ ಸ್ವಲ್ಪ ನಿಧಿ ಕೂಡಿಸಿ ಬಡಕಾರ್ಮಿಕರ ಕುಟುಂಬಗಳಿಗೆ ಹಂಚಲಾಯಿತು.

ಷಹಬಾದ್ ಸಿಮೆಂಟ್ ಕೆಲಸಗಾರರು

ಷಹಾಬಾದ್ ಸಿಮೆಂಟ್ ಕೆಲಸಗಾರರ ಜನರಲ್ ಕೌನ್ಸಿಲ್ ಸಭೆಯು ತಾರೀಕು 25—9—58ರಂದು ಸಭೆಸೇರಿ, ಹಟ್ಟಿ ಚಿನ್ನದ ಗಣಿ ಕೆಲಸಗಾರರ ನ್ಯಾಯವಾದ ಹೋರಾಟಕ್ಕೆ ಬೆಂಬಲ ಸೂಚಿಸುವ ನಿರ್ಣಯವನ್ನು ಮಾಡಿತು. ತಮ್ಮ ಬೆಂಬಲದ ಸಂಕೇತವಾಗಿ 60 ರೂ.ನ್ನು ಹೋರಾಟದ ನಿಧಿಗೆ ಕಳಿಸಲಾಯಿ.

ಐ. ಎನ್. ಟಿ. ಯು. ಸಿ.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ರೂ. 100ನ್ನು ಕಳಿಸಿದೆ.

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಬರೆದಿರುವ ಪತ್ರದಲ್ಲಿ ಎ. ಐ. ಟಿ. ಯು. ಸಿ.ಯು ಸಾಂಕೇತಿಕವಾಗಿ ಹಟ್ಟಿ ಚಿನ್ನದ ಗಣಿ ಕೆಲಸಗಾರರ ಹೋರಾಟಕ್ಕೆ ನೂರು ರೂಪಾಯಿ ಕಳಿಸುತ್ತಿರುವುದಾಗಿಯೂ, ಪ್ರಾಂತದಲ್ಲಿರುವ ಟ್ರೇಡ್ ಯೂನಿಯನ್‌ಗಳ ಈ ಹೋರಾಟಕ್ಕೆ ಹೆಚ್ಚಿನ ನೆರವೀಯ ಬೇಕೆಂದೂ ತಿಳಿಸಲಾಗಿದೆ.

ಹರಿಹರ—

ಕಿರ್ಲೋಸ್ಕರ್ ಕಾರ್ಮಿಕರಿಗೆ ಬೋನಸ್ !

ಹರಿಹರ ಕಿರ್ಲೋಸ್ಕರ ಕಂಪೆನಿಯ ಕಾರ್ಮಿಕರು 1955ನೆಯ ಸಾಲಿನ ಬೋನಸ್ ವಿವಾದದಲ್ಲಿ ಜಯ ಗಳಿಸಿದ್ದಾರೆಂದು ಸುದ್ದಿ ಗೊತ್ತಾಗಿದೆ. 1955ರ ಬೋನಸ್‌ನ ಸಲುವಾಗಿ, 1956ರಲ್ಲಿ 2 ತಿಂಗಳ ಪ್ರಚಂಡ ಮುಷ್ಕರವನ್ನು ಕಿರ್ಲೋಸ್ಕರ್ ಕಾರ್ಮಿಕರು ನಡೆಸಿದ್ದರು. ಈ ವಿವಾದವನ್ನು ಸಂಧಾನದ ಮೂಲಕ ಬಗೆಹರಿಸುವ ಬದಲು, ಸರ್ಕಾರ ಪಂಚಾಯ್ತಿ ಕೋರ್ಟಿಗೆ ಕಳುಹಿಸಿತು. ಆ ವರುಷದಲ್ಲಿ ಲಾಭವಿಲ್ಲವೆಂದು ಕಂಪೆನಿಯವರು ಮೊಂಡುತನ ಮಾಡಿದ್ದೇ ಈ ಮುಷ್ಕರಕ್ಕೆ ಕಾರಣವಾಯಿತು. ಪಂಚಾಯ್ತಿ ಕೋರ್ಟಿನ ತೀರ್ಪು ಒಂದೆರಡು ವಾರಗಳಲ್ಲಿ ಪ್ರಕಟವಾಗಲಿದೆ. ಈಗಾಗಲೇ ಕೊಟ್ಟಿರುವ ಒಂದು ತಿಂಗಳಲ್ಲದೆ ಮತ್ತೊಂದು ತಿಂಗಳ ಬೋನಸ್ ಕೊಡಲು ಲಾಭವಿದೆಯೆಂದು ಕೋರ್ಟಿನವರು ಅಭಿಪ್ರಾಯಪಟ್ಟಿದ್ದಾರೆಂದು ಗೊತ್ತಾಗಿದೆ.

ಮೈಸೂರು—

ಚೀಣಾ ದಿನಾಚರಣೆ

ಭಾರತ—ಚೀಣಾ ಮೈತ್ರಿ ಸಂಘದ ಆಶ್ರಯದಲ್ಲಿ ತಾ. 1—10—'58ರಂದು ಮೈಸೂರಿನಲ್ಲಿ ಸಹಕಾರ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಆನಂದ ಮತ್ತು ಶ್ರೀ ಎಸ್. ಸೋಮಸುಂದರ ಶರ್ಮರವರು ಭಾಷಣ ಮಾಡಿದರು. ಭಾಷಣಕಾರರು, ಅಮೇರಿಕಾ ಹೇಗೆ ಚೀಣಾ ದೇಶದ ಅಂತರಿಕ ವ್ಯವಹಾರದಲ್ಲಿ ಕೈಹಾಕಿದೆ ಎಂಬುದನ್ನು ವಿವರಿಸಿದರು. ಜನತಾ ಚೀಣಾ ಸರಕಾರಕ್ಕೆ ಕೂಡಲೇ ಅಂತರರಾಷ್ಟ್ರೀಯ ಸಂಸ್ಥೆಯಲ್ಲಿ ಪ್ರಾತಿನಿಧ್ಯ ಸಿಗಬೇಕೆಂದು, ಅಮೇರಿಕಾ ಕೂಡಲೇ ಚೀಣಾ ದೇಶದ ಪೂರ್ವ ತೀರದ ದ್ವೀಪಗಳಲ್ಲಿ ನೆಲಸಿರುವ ತನ್ನ ಸೈನ್ಯಗಳನ್ನು ವಾಪಸ್ಸು ಪಡೆಯಬೇಕೆಂದು ಮತ್ತು ಇದರಿಂದ ಮೂರನೇ ಮಹಾಯುದ್ಧದ ಭೀತಿಯು ತೊಲಗುವಂತಾಗುವುದೆಂದು ತಿಳಿಸಿದರು. ಕೊನೆಯಲ್ಲಿ ಅಧ್ಯಕ್ಷರು ಜನತಾ ಚೀಣಾ ಸರಕಾರವು ಸಾಧಿಸಿರುವ ಪ್ರಗತಿಯನ್ನು ವಿವರಿಸಿ, ಭಾರತ ಸರಕಾರವು ಕೂಡಲೆ ಅಮೇರಿಕಾವು ಸೈನ್ಯದ ವಾಪಸಾತಿಗೆ ಹೆಚ್ಚು ಶ್ರಮಿಸಬೇಕೆಂದು ಕೋರಿದರು. ರಾಷ್ಟ್ರ ಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಚಿಕ್ಕಮಗಳೂರು—

ತಾ. 1-10-58ರಂದು ಸಂಜೆ 7 ಗಂಟೆಗೆ ಶ್ರೀ ಎಂ. ವಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿ ಕಛೇರಿಯಲ್ಲಿ ಚೀಣಾ ಜನತಾ ರಿಪಬ್ಲಿಕ್ ದಿನಾಚರಣೆ ಸಂಬಂಧವಾಗಿ ಸಭೆ ಸೇರಿತ್ತು. ಕಾರ್ಯದರ್ಶಿ ಶ್ರೀ ಬಿ. ವೀರಣ್ಣನವರು ಜನತಾ ಚೀಣಾದ ವಿಷಯ ಕುರಿತು ಮಾತನಾಡಿದರು. ಎಂ. ವಿ. ಭಾಸ್ಕರ್‌ರವರು ಚೀಣಾದ ಸಾಧನೆಯನ್ನು ಕುರಿತು ವಿವರಿಸಿದರು.

ಶ್ರದ್ಧಾಂಜಲಿ

ಮಂಗಳೂರಿನ ಕೊಟ್ಟಾರದಲ್ಲಿ ವಾಸವಾಗಿದ್ದ ಕಾ|| ಕೆ. ಪಿ. ಕುಮಾರನ್ (ವೈದ್ಯರ್) ಇತ್ತೀಚೆಗೆ ಕಲ್ಲಿಕೋಟೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೋಗಿದ್ದವರು ಕಳೆದ ವಾರದಲ್ಲಿ ಮೃತರಾದರು.

ಇವರು ಹಲವಾರು ವರುಷಗಳಿಂದ ಮಂಗಳೂರಿನಲ್ಲೇ ಇದ್ದುಕೊಂಡು, ಕೆಲವು ವರುಷಗಳಿಂದೀಚೆಗೆ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿ, ಪಾರ್ಟಿಯಲ್ಲೂ, ರೈತ ಸಂಘಟನೆಯಲ್ಲೂ ದುಡಿದುಕೊಂಡು ಬಂದಿದ್ದರು. ಒಂದು ವರುಷದಿಂದ ಕಾಯಿಲೆಯಲ್ಲಿ ನರಳುತ್ತಿದ್ದರು. ನಾಲ್ಕೈದು ತಿಂಗಳಿಂದ ಕಲ್ಲಿಕೋಟೆ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರು ಮೃತಪಟ್ಟರೆಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ.

ಮೃತರ ಮರಣದಿಂದ—ಅವರ ಕುಟುಂಬಕ್ಕೆ ಮಾತ್ರವಲ್ಲ, ಕಮ್ಯೂನಿಸ್ಟ್ ಪಾರ್ಟಿಗೂ ದೊಡ್ಡ ನಷ್ಟವಾಗಿದೆ.

ಮಂಗಳೂರಿನ (ಬಂಗ್ರಕೂಳೂರು) ಬಿ. ಕೆ. ವೆಂಕಪ್ಪ ಪೂಜಾರಿಯವರು, ಕಮ್ಯೂನಿಸ್ಟ್ ಪಾರ್ಟಿಯ ಹಿತಚಿಂತಕರೂ, ಮಂಗಳೂರು ನೇಯಿಗೆ ಕೆಲಸಗಾರರ ಸಂಘದಲ್ಲಿ ಬಹಳವಾಗಿ ದುಡಿದವರೂ, ಯಕ್ಷಗಾನ ಕಲಾವಿದರೂ ಆಗಿದ್ದರು.

ಇವರು, ತಾ. 22—9—58ನೇ ಸೋಮವಾರ ಹೃದಯಕ್ರಿಯೆ ನಿಂತು ಹೋಗಿ, ಆಕಸ್ಮಾತ್ ಮರಣಕ್ಕೆ ತುತ್ತಾದರೆಂದು ವಿಷಾದದಿಂದ ನಿವೇದಿಸಿಕೊಳ್ಳುತ್ತೇವೆ.

ಶ್ರೀಯುತರ ನಿಧನದಿಂದಾಗಿ, ಅವರ ಬಂಧುಗಳಿಗಾದ ನಷ್ಟದಲ್ಲಿ ನಾವು ಕೂಡಾ ಸಹಭಾಗಿಗಳು.

ಕಾಂಗ್ರೆಸ್ ಎಂ.ಎಲ್.ಎ. ರಾತ್ರಿ ಕೆಲಸ ಮಾಡಿಸುತ್ತಿದ್ದಾರೆ!

ಸಂಪಾದಕರಿಗೆ ಪತ್ರಗಳು

ಕಾಂಗ್ರೆಸ್ ಎಂ ಎಲ್.ಎ ಯವರಾದ ಪಡಗಾನೂರು ಶಂಕರ ಗೌಡ ಪಾಟೀಲರು ಸಿಂದಗಿಯ ಕಚೇರಿಯಲ್ಲಿ ರಾತ್ರಿ ಹೊತ್ತು ಕಂದೀಲ ಹಚ್ಚಿ ಸರಕಾರಿ ನೌಕರದಾರರನ್ನು ದುಡಿಸುತ್ತಿದ್ದಾರಂತೆ.

ಪಾರ್ಲಿಮೆಂಟಂ ಬೋರ್ಡಿನವರು ತನ್ನ ಹೆಂಡತಿಗೆ ತಿಕೇಟ್ ಕೊಟ್ಟಿದ್ದರೂ ಕೂಡ, ಅವರನ್ನು ಹಾರಿಸಿ, ಅವರ ಜಾಗದಲ್ಲಿ ಅಸೆಂಬ್ಲಿಗೆ ಚುನಾಯಿತರಾಗಿ ಬಂದು, ಬೆಂಗಳೂರಿಂದ ಬಿಜಾಪುರ ತನಕ ತಿಕೇಟಿಲ್ಲದೆ, ಮೊದಲನೇ ವರ್ಗದಲ್ಲಿ ಪ್ರಯಾಣ ಮಾಡಿ ಪ್ರಸಿದ್ಧಿ ಪಡೆದ ಈ ಮಹಾಶಯರು, ಸರಕಾರದವರು ನೌಕರದಾರರ ತುಟ್ಟಿ ಭತ್ತೆ, ಪಗಾರ ಕಡಿಮೆ ಮಾಡಿದಾಗ, ಅಸೆಂಬ್ಲಿಯಲ್ಲಿ ಚಕಾರ ಎತ್ತದೆ, ಕಚೇರಿಗಳಲ್ಲಿ ನೌಕರದಾರರನ್ನು ರಾತ್ರಿ ಹೊತ್ತು ದುಡಿಸಲು ಹಿಂಜರಿಯುತ್ತಿಲ್ಲಂತೆ.

ತಾ. 24—9—58ನೇ ದಿವಸ ಸಂಜೆ 6 ಗಂಟೆಗೆ ಈ ಮಹನೀಯರು ಸಿಂದಗಿ ಸಬ್-ರಿಜಿಸ್ಟ್ರಾರ ಕಚೇರಿಗೆ ಹೋಗಿ, ಈ ಗಿಂದೀಗ ಜಮೀನ ರಿಜಿಸ್ಟರ ಮಾಡುವ ಕೆಲಸಮಾಡಿ ಕೊಡಬೇಕೆಂದು ಒತ್ತಾಯ ಮಾಡಿದರಂತೆ, ಕಾಂಗ್ರೆಸ್ ಎಂ.ಎಲ್.ಎ. ಗಳ ಮಾತು ಮೀರಿದರೆ ತಮಗೆ ಅನಿಷ್ಟ ಖಂಡಿತನೆಂದು ತಿಳಿದ ನೌಕರದಾರರು ಒಂದು ಕಂದೀಲ ಹಚ್ಚಿ, ರಾತ್ರಿ 8ರ ತನಕ ಕೆಲಸ ಮಾಡಿದರಂತೆ. ಕಚೇರಿ ವೇಳೆ ಮುಗಿದ ನಂತರ, ಹಳ್ಳಿ ಜನರನ್ನು ಕರಕೊಂಡು ಬಂದು, ಕಂದೀಲ ಹಚ್ಚಿ ಗಡಿಬಿಡಿಯಲ್ಲಿ ಮಾಡಿಸುವಂಥಾ ಕೆಲಸವಾದರೂ ಏನಿತ್ತು ? ಇತ್ತೀಚೆಗೆ ರಾತ್ರಿ ಹೊತ್ತಿನಲ್ಲಿಯೇ ಕಾಂಗ್ರೆಸ್ಸಿನವರ ಚಟುವಟಿಕೆ ಹೆಚ್ಚಾಗಿದೆ. ಈ ರೀತಿ ರಾತ್ರಿ ಹೊತ್ತು ನೌಕರದಾರರು ಕೆಲಸ ಮಾಡುವಂತೆ ಮಾಡುವುದು ಎಲ್ಲಿಯ ನ್ಯಾಯ ?

—ಓರ್ವ ನಾಗರಿಕ

ದಕ್ಷಿಣಕನ್ನಡ ಜಿಲ್ಲೆ—

ಪ್ರೆಸ್ ಮಜೂರರ ಸಭೆಗಳು

ಪುತ್ತೂರು: ಪುತ್ತೂರು ತಾಲೂಕು ಪ್ರೆಸ್ ಮಜೂರರ ಸಭೆಯೊಂದು ತಾರೀಕು 21-9-58ರಂದು ಶ್ರೀ ಯಂ. ಗೋಪಾಲರವರ ಅಧ್ಯಕ್ಷತೆಯಲ್ಲಿ ಜರಗಿತು. ಪುತ್ತೂರು ತಾಲೂಕಿನ ಪ್ರೆಸ್ ಮಜೂರರ ಸಂಘಟನೆಯನ್ನು ಬಲವಾಗಿ ಮುನ್ನಡೆಸಿಕೊಂಡುಹೋಗಲು 5 ಜನರುಳ್ಳ ಒಂದು ಕಮಿಟಿಯನ್ನು ರಚಿಸಿ, ಕಾ|| ಯಂ. ಚಂದ್ರನ್‌ರವರನ್ನು ಪ್ರಾದೇಶಿಕ ಅಧ್ಯಕ್ಷರಾಗಿಯೂ, ಕಾ|| ಯಂ. ನಾರಾಯಣರವರನ್ನು ಕಾರ್ಯದರ್ಶಿಯಾಗಿಯೂ, ಕಾರ್ಯಕಾರಿ ಸಮಿತಿ ಸದಸ್ಯರಾಗಿ 3 ಜನರನ್ನು ಸಭೆಯಲ್ಲಿ ಆರಿಸಲಾಯಿತು.

ಮೂಲ್ಕಿ: ಮೂಲ್ಕಿ ತಾಲೂಕು ಪ್ರೆಸ್ ಮಜೂರರ ಸಭೆಯೊಂದು ತಾ.

(೮ನೇ ಪುಟ ನೋಡಿ)

ಬೇಕೆಂದೂ ಮಾತ್ರವಲ್ಲದೆ, ಈ ಕುರಿತು ಸಂಘಟಿತ ಚಳವಳಿ ನಡೆಸಲು ಜಿಲ್ಲೆಯಿಂದ ಬೆಂಗಳೂರಿಗೆ ಹೋಗುವ ಜಾಥಾದಲ್ಲಿ ಇಲ್ಲಿಂದಲೂ ಪ್ರತಿನಿಧಿಗಳನ್ನು ಕಳುಹಿಸಬೇಕೆಂತಲೂ ತೀರ್ಮಾನಿಸಲಾಯ್ತು. ಅಧ್ಯಕ್ಷರ ಭಾಷಣವಾದ ಬಳಿಕ ಸಭಾಂತ್ಯವಾಯಿತು.

ಶ್ರೀ ಎಂ ಗುರುವನವರ ಅಧ್ಯಕ್ಷತೆಯಲ್ಲಿ ಮೂಡನಿಡಂಬೂರು ಪ್ರದೇಶದ ಬೀಡಿ ಮಜೂರರ ಸಭೆಯು ಶಿರಿಬೀಡಿನಲ್ಲಿ ಜರಗಿತು. ಪ್ರದೇಶ ಸಮಿತಿಯ ಕಾರ್ಯದರ್ಶಿ ಶ್ರೀ ಕೊರಗ ಶೆಟ್ಟರು ವರದಿಯನ್ನಿತ್ತ ಬಳಿಕ ಸಂಘಟನೆಯನ್ನು ಬಲಗೊಳಿಸುವ ಮತ್ತು ಕಾನೂನಿಗಾಗಿರುವ ಚಳವಳವನ್ನು ತೀವ್ರಗೊಳಿಸುವ ಕುರಿತು ಶ್ರೀಗಳಾದ ಗೋಪಾಲ ಸುವರ್ಣ ಮತ್ತು ಷಿ. ಸೀನ ನಾಯ್ಕರು ಭಾಷಣವಿತ್ತರು. ಬೀಡಿ ಮಜೂರರ ಹಿತರಕ್ಷಣ ಮಸೂದೆ ಮತ್ತು ಕನಿಷ್ಠ ಕೂಲಿ ನಿರ್ಣಯಿಸಿರುವ ಮೈಸೂರು ಸರ್ಕಾರದ ನೀತಿಯ ಕುರಿತು ವಿಷಾದ ಸೂಚಿಸಿ, ಒಡನೆ ಕಾನೂನನ್ನು ರಚಿಸಬೇಕೆಂದು ಕೇಳಿಕೊಳ್ಳುವ ಮತ್ತು ಸರಕಾರವನ್ನು ಒತ್ತಾಯಿಸಲಿಕ್ಕಾಗಿ ಇದೇ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಸೆಕ್ರೆಟರಿಯೇಟ್ ಮುಂದೆ ಮತಪ್ರದರ್ಶನ ನಡೆಸುವ ಯೂನಿಯನಿನ ತೀರ್ಮಾನವನ್ನು ಕಾರ್ಯಗತಗೊಳಿಸುವ ಕುರಿತು ನಿರ್ಣಯಗಳಾದುವು. ಅಧ್ಯಕ್ಷರ ಭಾಷಣವಾದ ಬಳಿಕ ಸಭಾಂತ್ಯವಾಯಿತು.

ಕನಿಷ್ಠ ಕೂಲಿ ಹೋರಾಟದಲ್ಲೊಂದು ಅಪೂರ್ವ ಘಟನೆ

ದಕ್ಷಿಣ ಕನ್ನಡದಿಂದ ಬೆಂಗಳೂರಿಗೆ ಕಾಲ್ನಡಿಗೆಯ ಜಾಥಾ

ಬೀಡಿ ಮಜೂರರ ಸಂಘಗಳೆಲ್ಲ ಪ್ರತಿನಿಧಿಗಳನ್ನು ಕಳುಹಿಸಲು ಸಿದ್ಧವಾಗುತ್ತಿವೆ

ಮಂಗಳೂರು, ಜಪ್ಪು ಪ್ರದೇಶ ಬೀಡಿ ಮಜೂರರ ಮಹಾಸಭೆಯು ಶ್ರೀ ಬಿ. ಸಿ. ಶೇಖರರವರ ಅಧ್ಯಕ್ಷತೆಯಲ್ಲೂ, ಕುದ್ರೋಳಿ ಮತ್ತು ಕಂಕನಾಡಿ ಪ್ರದೇಶ ಬೀಡಿ ಮಜೂರರ ಸಭೆಗಳು ಶ್ರೀಯುತರುಗಳಾದ ಮಾಧವ ಮತ್ತು ಕೆ. ಮೂಸಬ್ಬ ಇವರುಗಳ ಅಧ್ಯಕ್ಷತೆಯಲ್ಲಿ ತಾ. 5—10—58 ರಂದು ಸೇರಿ, ಬೀಡಿ ಮಜೂರರಿಗೆ ಸಾವಿರ ಬೀಡಿಗೆ ರೂ. 2 ಕನಿಷ್ಠ ಕೂಲಿ ಮತ್ತು ಕಾನೂನು ರಚನೆಯ ಕುರಿತು ಈ ವರೆಗೆ ಯಾವೊಂದು ಕಾರ್ಯಕ್ರಮ ಕೈಕೊಳ್ಳದ ಮೈಸೂರು ಸರಕಾರದ ಮಜೂರ ಧೋರಣೆಯ ಬಗ್ಗೆ ವಿಷಾದ ಸೂಚಿಸಿ, ಈ ವಿಷಯದಲ್ಲಿ ಸರಕಾರವನ್ನು ಒತ್ತಾಯಿಸಲು ಮಂಗಳೂರಿನಿಂದ ಕಾಲ್ನಡೆ ಜಾಥಾವೊಂದನ್ನು ಹೊರಡಿಸಿ, ಬೆಂಗಳೂರಿನಲ್ಲಿ ಸೆಕ್ರೆಟರಿಯೇಟಿನ ಮುಂದೆ ಮತಪ್ರದರ್ಶನ ನಡೆಸಬೇಕೆಂಬ ಯೂನಿಯನಿನ ತೀರ್ಮಾನಕ್ಕೆ ಸಂಪೂರ್ಣ ಬೆಂಬಲ ಸೂಚಿಸುವ ಠರಾವನ್ನು ಸ್ವೀಕರಿಸಲಾಯಿತು.

ಈ ಸಭೆಗಳಲ್ಲಿ ಶ್ರೀಯುತರು ಕೆ. ಮೋನಪ್ಪ ಶೆಟ್ಟಿ, ಯು. ಕೃಷ್ಣ, ಕೃಷ್ಣ ಪಿಳ್ಳೆ, ರಂಗಪ್ಪ, ಎ. ಪಕೀರ, ವಿಶ್ವನಾಥ ಮೊದಲಾದವರು ಮಾತನಾಡಿ ಯೂನಿಯನಿನ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ವಿನಂತಿಸಿಕೊಂಡರು.

ತಾ. 28—9—58ರಂದು ಮಂಗಳೂರಿನ ಬೋಳಾರ ಪ್ರದೇಶದಲ್ಲಿ ಶ್ರೀ ಬಿ. ನಾರಾಯಣರವರ ಅಧ್ಯಕ್ಷತೆಯಲ್ಲೂ, ದೇರೆಬೈಲಿನಲ್ಲಿ ಯು. ಮೋನಪ್ಪನವರ ಅಧ್ಯಕ್ಷತೆಯಲ್ಲೂ, ಪದವು, ಕೊಡಿಯಾಲ್ ಬೈಲ್ ಮತ್ತು ಜಪ್ಪಿನಮೊಗರು ಪ್ರದೇಶಗಳಲ್ಲಿ ಅನುಕ್ರಮವಾಗಿ ಶ್ರೀಯುತರಾದ ಪಿ. ಸದಾಶಿವ, ಕೆ. ಚಂದ್ರಹಾಸ ಮತ್ತು ಐತಪ್ಪ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಸೇರಿದ ಬೀಡಿ ಮಜೂರರ ಮಹಾಸಭೆಗಳು, ಬೀಡಿ ಮಜೂರರಿಗೆ ಕನಿಷ್ಠ ಕೂಲಿಯಾಗಿ ರೂ. 2 (ಸಾವಿರ ಬೀಡಿಗೆ) ನಿಶ್ಚಯಿಸಲು ಮತ್ತು ಬೀಡಿ ಮಜೂರರ ಹಿತರಕ್ಷಿಸುವ ಕಾನೂನನ್ನು ರಚಿಸಲು ಮೈಸೂರು ಸರಕಾರವು ಈ ವರೆಗೆ ಯಾವುದೇ ರೀತಿಯ ಕಾರ್ಯಕ್ರಮ ಕೈಕೊಳ್ಳದಿರುವ ಕುರಿತು ವಿಷಾದ ಸೂಚಿಸಿ ಈ ಬಗ್ಗೆ ಸರಕಾರವನ್ನು ಒತ್ತಾಯಪಡಿಸಲು ನವಂಬರ್ ತಿಂಗಳಲ್ಲಿ ಮಂಗಳೂರಿನಿಂದ ಕಾಲ್ನಡೆ ಜಾಥಾವೊಂದನ್ನು ಹೊರಡಿಸಿ ಬೆಂಗಳೂರಿನಲ್ಲಿ ಸೆಕ್ರೆಟಾರಿಯೇಟಿನ ಮುಂದೆ ಮತಪ್ರದರ್ಶನ ನಡೆಸಬೇಕೆಂಬ ಯೂನಿಯನಿನ ತೀರ್ಮಾನಕ್ಕೆ ಸಂಪೂರ್ಣ ಬೆಂಬಲ ಸೂಚಿಸುವ ಠರಾವುಗಳು ಸ್ವೀಕರಿಸಲ್ಪಟ್ಟವು.

ಯೂನಿಯನಿನ ಕಾರ್ಯಕ್ರಮಗಳನ್ನು ವಿವರಿಸಿ, ಶ್ರೀಯುತರು ಕೆ. ಮೋನಪ್ಪ ಶೆಟ್ಟಿ, ಯು. ಕೃಷ್ಣ, ಕೃಷ್ಣ ಪಿಳ್ಳೆ, ಆನಂದ, ಬಾಬು, ಗಂಗಾಧರ, ಮಹಾಬಲ, ಕೃಷ್ಣಪ್ಪ, ರಾಮಪ್ಪ, ಗಣಪ ಮೊದಲಾದವರು ಈ ಸಭೆಗಳಲ್ಲಿ ಮಾತನಾಡಿದರು.

ಉಡುಪಿ—

ಪಣಿಯಾಡಿ ವಾರ್ಡಿನ ಬೀಡಿ ಮಜೂರರ ಸಭೆಯು ಶ್ರೀ ನಾರಾಯಣ ಮರಕಾಲರ ಅಧ್ಯಕ್ಷತೆಯಲ್ಲಿ ಪಣಿಯಾಡಿಯಲ್ಲಿ ಜರುಗಿತು. ಆರಂಭದಲ್ಲಿ ಪ್ರದೇಶ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಮೋನಪ್ಪ ಸಾಲಿಯಾನರು ವರದಿಯನ್ನಿತ್ತರು. ಸಂಘದ ಚಟುವಟಿಕೆ ಮತ್ತು ಸಂಘಟನೆಯನ್ನು ಬಲಪಡಿಸುವ ಆವಶ್ಯಕತೆಯ ಕುರಿತು ಶ್ರೀ ಗೋಪಾಲ ಸುವರ್ಣರು ಮಾತಾಡಿದ ಬಳಿಕ ಬೀಡಿ ಮಜೂರರಿಗೆ ಕನಿಷ್ಠ ಕೂಲಿ ನಿರ್ಣಯಿಸಲು ಮತ್ತು ಕಾನೂನು ರಚಿಸಲು ಮೈಸೂರು ಸರಕಾರವು ಈ ವರೆಗೆ ಯಾವುದೇ ಕ್ರಮ ಕೈಕೊಳ್ಳದಿರುವ ಕುರಿತು ವಿಷಾಧ ಸೂಚಿಸಿ, ಒಡನೆ 1,000 ಬೀಡಿಗಳಿಗೆ 2 ರೂಪಾಯಿಗಳಿಂದ ಕಡಿಮೆಯಾಗದಷ್ಟು ಕನಿಷ್ಠ ಕೂಲಿ ನಿರ್ಣಯಿಸ

ಮೈಸೂರು ಸರಕಾರದ ವಿರುದ್ಧ ಹೈಕೋರ್ಟಿನಲ್ಲಿ ದಾವೆ!

ಸಂಬಳ ಕಡಿತದ ಬಗ್ಗೆ ಹಾಹಾಕಾರ, ಪಕ್ಷಪಾತೀ ನೀತಿಯ ಬಗ್ಗೆ ಅಸಂತುಷ್ಟಿ

ಈಗಾಗಲೇ ನವಮೈಸೂರು ಸರಕಾರ ಪೋಲೀಸ, ರೆವಿನ್ಯೂ ಮತ್ತಿನ್ನಿತರ ನೌಕರದಾರರ ಪಗಾರ, ಅಲಾವನ್ಸಗಳನ್ನು ಕಡಿಮೆ ಮಾಡಿರುವುದರಿಂದುಂಟಾದ ಹಾಹಾಕಾರ ಕುಗ್ಗುವುದರಷ್ಟರಲ್ಲೇ, ಲೋಕಲ್ ಬೋರ್ಡು ಕಾರಕೂನರ ಪಗಾರದಲ್ಲಿ ಕಡಿತ ಮಾಡಿರುವರೆಂಬ ಸುಕ್ಯುಲರ್ ಬಂದಿದೆ. ಮುಂಬಯಿ ಸರಕಾರವಿದ್ದಾಗಿನಿಂದ ಕಾರಕೂನರಿಗೆ ತಿಂಗಳ ರೂ. 55-3-80-5-130 ಇತ್ತು. ರೂ. 45 ತುಟ್ಟಿ ಸಿಗುತ್ತಿತ್ತು. ಈಗ ಹೊಸ ಹುಕುಮಿನ ಪ್ರಕಾರ ಪಗಾರ ಸ್ಕೇಲು ರೂ. 50ರಿಂದ ರೂ. 120 ಮತ್ತು ತುಟ್ಟಿ ಭತ್ತೆ ರೂ. 25 ಹೀಗಾಗಿ ಸ್ಕೇಲಿನಲ್ಲಿಯೂ ಕಡಿತ, ತುಟ್ಟಿ ಭತ್ತೆಯಲ್ಲಿಯೂ ಕತ್ತರಿ.

ಕೇರಳ ಸರಕಾರ ನಾಲ್ಕನೇ ವರ್ಗದ ನೌಕರದಾರನ ಕನಿಷ್ಠ ಪಗಾರ ತಿಂಗಳಿಗೆ ರೂ. 67 ಎಂದು ನಿರ್ಧರಿಸಿದೆ. ಕಾಂಗ್ರೆಸ್ಸಿಗರ ಬಲವಾದ ಟೀಕೆಗೆ ಒಳಗಾದ, ಕೇರಳದ ಕಮ್ಯೂನಿಸ್ಟ್ ಸರಕಾರ ನೌಕರದಾರರ ಪಗಾರ ಹೆಚ್ಚಿಸುತ್ತಿರುವಾಗ, ಇಲ್ಲಿಯ ಕಾಂಗ್ರೆಸ ಸರಕಾರ, ನೌಕರದಾರರ ವೇತನವನ್ನು ಒಂದೇ ಸವನೆ ಕಡಿಮೆ ಮಾಡಿ ಅಸಂತುಷ್ಟಿಯನ್ನುಂಟುಮಾಡುತ್ತಿರುವವರು ಎಲ್ಲಾ ನೌಕರದಾರರೂ, ನಾಗರಿಕರ ಸರಕಾರದ ಈ ನೀತಿಯನ್ನು ಖಂಡಿಸಲೇ ಬೇಕಾಗಿದೆ.

ಸರಕಾರಿ ನೌಕರದಾರರ ನೇಮಣೂಕಿಯಲ್ಲಿ ಕೇರಳದ ಕಮ್ಯೂನಿಸ್ಟ್ ಸರಕಾರ ಕೈಹಾಕಿ, ತನ್ನ ಪಕ್ಷದ ಬೆಂಬಲಿಗರನ್ನೂ ಸರಕಾರಿ ನೌಕರಿಗಳಲ್ಲಿ ತುಂಬುತ್ತಿದೆಂದು, ಕಾಂಗ್ರೆಸ್ ಅಧ್ಯಕ್ಷ ದೇಭರಭಾಯಿ ಮತ್ತಿನ್ನಿತರ ಕಾಂಗ್ರೆಸ್ ಮುಖಂಡರು ಕಮ್ಯೂನಿಸ್ಟರ ಮೇಲೆ ಆರೋಪ ಹೊರಿಸಿರುವರು. ಈ ಆರೋಪ ಶುದ್ಧ ಸುಳ್ಳೆಂಬುದು ಎಲ್ಲರಿಗೂ ಗೊತ್ತು. ಪಬ್ಲಿಕ್ ಸರ್ವಿಸ ಕಮಿಶನ್ನಿನವರು, ಆಯಾ ವ್ಯಕ್ತಿಯ, ಶಿಕ್ಷಣ, ಅನುಭವ, ಕಾರ್ಯದಕ್ಷತೆಗಳನ್ನು ಪರಿಶೀಲಿಸಿ ನೌಕರಿ ಮೇಲೆ ತೆಗೆದುಕೊಳ್ಳುವುದಾಗಲೀ, ಪ್ರೊಮೋಷನ್ ಕೊಡುವುದಾಗಲೀ ಮಾಡುತ್ತಿದ್ದಾರೆ. ಮತ್ತೊಬ್ಬರಿಗೆ ಬೊಟ್ಟು ಮಾಡಿ ತೋರಿಸುವ ಕಾಂಗ್ರೆಸ್ ಸರಕಾರ ತನ್ನ ನೌಕರದಾರರಿಗೆ ಎಷ್ಟು ಅನ್ಯಾಯ ಹೂಡುತ್ತಿದೆ!

ಬಿಜಾಪುರ ಪತ್ರ

ಹೋದ ತಿಂಗಳಲ್ಲಿ ಮೈಸೂರು ಸರಕಾರದವರು ನಡೆಸಿದ ಪ್ರೊಬೆಶನರಿ ತಹಶೀಲದಾರ ಮತ್ತು ಬಿ. ಡಿ. ಒ. ಅಧಿಕಾರಿಗಳ ಆಯ್ಕೆಯು ಎಲ್ಲ ನಿಯಮಗಳಿಗೂ ವಿರುದ್ಧವಾಗಿದ್ದು, ಮಂತ್ರಿಗಳ ಮತ್ತು ಕಾಂಗ್ರೆಸ ಎಂ.ಎಲ್.ಎ.ಗಳಿಗೆ ಬೇಕಾದವರಷ್ಟೇ ಆಯ್ಕೆಗೊಂಡಿದ್ದಾರಂತೆ. ಇದರಿಂದ ನೌಕರದಾರರಲ್ಲಿ ತೀವ್ರ ಅಸಮಾಧಾನವಾಗಿದ್ದು ಸರಕಾರದ ವಿರುದ್ಧ ಹ್ಯಾಕೋರ್ಟಿನಲ್ಲಿ ಇವರು ದಾವೆ ಮಾಡಿದ್ದಾರೆ.

ರೆವೆನ್ಯೂ ಖಾತೆಗೆ ಸಂಬಂಧಿಸಿದ ಈ ಅಧಿಕಾರಿಗಳನ್ನು ಅದೇ ಖಾತೆಯಿಂದ ಆರಿಸಬೇಕಾಗಿತ್ತು. ಹಾಗೆ ಮಾಡದೆ ಆಡಿಟ್ ಮೊದಲಾದ ಖಾತೆಗಳಿಂದಲೂ ಆರಿಸಲಾಗಿದೆ, ಈಗಾಗಲೇ ಅಫೀಸಿಯೇಟಿಂಗ್ ತಹಶೀಲದಾರರೆಂದು ಕೆಲಸ ಮಾಡಿರುವ ಮತ್ತು ಮಾಡುತ್ತಿರುವ ಅವಲಕಾರಕೂನ ಮತ್ತು ಇತರ ಸೀನಿಯರ ನೌಕರದಾರರ ಭವಿಷ್ಯದ ಮೇಲೆ ಇದರಿಂದ ಕೆಟ್ಟ ಪರಿಣಾಮವಾಗಿದೆ. ಹೊಸ ಮೈಸೂರು ಸರಕಾರ ಯಾವುದೇ ಒಂದು ನಿರ್ದಿಷ್ಟ ನಿಯಮಗಳನ್ನನುಸರಿಸದೆ, ಎಲ್ಲ ಭಾಗದ ಜನರ ಮನ ಒಲಿಸುವ ನೆವದಿಂದ ಸೀನಿಯರ ಮತ್ತು ಅನುಭವಸ್ಥ ನೌಕರದಾರರನ್ನು ಕಡೆಗಣಿಸುತ್ತಿದೆ. ಇದರಿಂದ ಜಿಲ್ಲಾ ಮತ್ತು ತಾಲೂಕ ಕಚೇರಿಗಳ ಕೆಲಸದಲ್ಲಿ ವ್ಯತ್ಯಯ ಬರುವುದರಲ್ಲಿ ಸಂಶಯವಿಲ್ಲ. ಸರಕಾರದವರು ಕೂಡಲೇ ಕಣ್ಣು ತೆರೆದು ಈ ನೌಕರದಾರರಿಗಾದ ಅನ್ಯಾಯವನ್ನು ದೂರ ಮಾಡಿ, ಎಲ್ಲರಿಗೂ ನ್ಯಾಯ ಸಿಗುವಂತೆ ಮಾಡಬೇಕು.

ಪ್ರೆಸ್ ಮಜೂರರ ಸಭೆಗಳು

(೧ನೇ ಪುಟದಿಂದ)

20—9—58ನೇ ಗುರುವಾರ ಕಾ|| ಯಂ. ಗೋಪಾಲರವರು ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಒಂದು ವರ್ಷದ ಹಿಂದೆ ಮೂಲ್ಕಿ ಪ್ರೆಸ್ಸಿನಲ್ಲಿ ಡಿಸ್‌ಮಿಸ್ ಮಾಡಲ್ಪಟ್ಟ ವಿವಾದವು ಲೇಬರ್ ಆಫೀಸರರ ಸಮ್ಮುಖದಲ್ಲಿ ಪಂಚಾಯಿತಿ ನಡೆದು ಮಾಲಕರು ಸಂಧಾನಕ್ಕೆ ಒಪ್ಪದ್ದರಿಂದಾಗಿ ಸಂಧಾನವು ಮುರಿದುಹೋಯಿತಷ್ಟೆ. ತದನಂತರ ಈ ವಿವಾದವನ್ನು ಸರಕಾರವು ಕೈಗಾರಿಕಾ ಕೋರ್ಟಿಗೆ ಒಪ್ಪಿಸಬೇಕೆಂದು ಎಷ್ಟೋ ಸಲ ಕೇಳಿಕೊಂಡರೂ ಸರ್ಕಾರವು ಗಮನ ಕೊಡದಿದ್ದುದರ ಬಗ್ಗೆ ಈ ಸಭೆ ತುಂಬಾ ವಿಷಾದಪಟ್ಟು, ಆ ವಿವಾದವನ್ನು ಕೂಡಲೇ ಸರಕಾರವು ಕೈಗಾರಿಕಾ ಕೋರ್ಟಿಗೆ ಒಪ್ಪಿಸಬೇಕೆಂದೂ ಸರಕಾರದ ಈ ರೀತಿಯ ಕಾಲಹರಣದಿಂದಾಗಿ ಮಜೂರರಲ್ಲಿ ಅತೃಪ್ತಿಯು ದಿನದಿಂದ ದಿನಕ್ಕೆ ಹೆಚ್ಚುತ್ತಾಹೋಗುವುದಕ್ಕೆ ಸರಕಾರವು ಪ್ರೋತ್ಸಾಹ ಕೊಡದೆ ಕೂಡಲೇ ಸಂಬಂಧಪಟ್ಟ ವಿವಾದದ ಬಗ್ಗೆ ಕಾರ್ಯಾಚರಣೆ ಕೈಕೊಳ್ಳಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ಠರಾವೊಂದು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಚೀನಾವನ್ನು ಹೊರಗಿಡುವ ಕತೆ

"ಮೂವತ್ತಕ್ಕೂ ಹೆಚ್ಚಿನ ಪ್ರಸಂಗಗಳಲ್ಲಿ ಚೀನಾವನ್ನು ಸಂಯುಕ್ತ ರಾಷ್ಟ್ರ ಸಂಘದಿಂದ ಹೊರಗಿಡುವ ಕಾರ್ಯದಲ್ಲಿ ನಾವು ಯಶಸ್ವಿಗಳಾಗಿದ್ದೇವೆ. ಮುಂದಿನ ವಾರಗಳಲ್ಲಿ ಮತ್ತೆ ಈ ಬಗ್ಗೆ ಪ್ರಯತ್ನ ನಡೆಯುತ್ತದೆ. ನಿಸ್ಸಂದೇಹವಾಗಿ ನಾವೇ ಮತ್ತೆ ಯಶಸ್ವಿಗಳಾಗುತ್ತೇವೆ." ಎಂಬುದಾಗಿ ಅಮೆರಿಕೆಯ ಪ್ರತಿನಿಧಿ ಕ್ಯಾಬಟ್ ಲಾಡ್ಜ್ ಘೋಷಿಸಿದ್ದ. ಈ ಸಲವೂ ಸಂ. ರಾ. ಸಂಸ್ಥೆಯ ಸರ್ವ ಸದಸ್ಯರ ಸಭೆಯು ಅಮೆರಿಕೆಯ ಈ ಗೊತ್ತುವಳಿಗೆ ಪರವಾಗಿ ಚೀನಾ ಚರ್ಚೆಯನ್ನು ಮತ್ತೆ ಮುಂದೂಡಿತು.

ಭಾರತದ ಪ್ರತಿನಿಧಿ ಶ್ರೀ ವಿ. ಕೆ. ಕೆ. ಮೆನೋನ್ ಚೀನಾ ಪ್ರವೇಶದ ಗೊತ್ತುವಳಿಯನ್ನು ಮಂಡಿಸಿದ್ದರು. ತಕ್ಷಣವೇ ಕ್ಯಾಬಟ್ ಲಾಡ್ಜ್ ವಿರೋಧಿಸಿದ. ಚೀನಾ ಪ್ರವೇಶವನ್ನು ಭಾರತವು ಮೂರನೆಯ ಸಲ ಎತ್ತಿದೆ ಎಂದು ಶ್ರೀ ಮೆನೋನ್ ಹೇಳಿದರು. ಭಾರತದ ಪರವಾಗಿ ಸಂಯುಕ್ತ ಅರಬ್ ಗಣರಾಜ್ಯ, ಬರ್ಮ, ಇಂಡೋನೇಷಿಯ, ಸಿಲೋನ್, ನೇಪಾಳ, ಅಫಘಾನಿಸ್ತಾನ್ ಇವು ಓಟು ಮಾಡಿದವು.

ಸಂ. ರಾ. ಸಂಸ್ಥೆಗೆ ಚೀನಾಕ್ಕೆ ಪ್ರವೇಶ ನೀಡದಿರಲು ಅಮೆರಿಕೆಯ ನೀಡುತ್ತಿರುವ ದುರುದ್ದೇಶ ಅದರ ಮಾತುಗಳಲ್ಲೇ ವ್ಯಕ್ತಪಟ್ಟಿದೆ. "ಚೀನಾದ ಬಂಧನಗಳನ್ನು ಕಡಿದೊಗೆಯುವದೆಂದರೆ ನಮಗೆ ಕಟ್ಟ ಕೊಂಡಂತೆಯೆ" ಎಂದು ಲಾಡ್ಜ್ ಹೇಳುತ್ತಾನೆ. ಆದರೆ 29 ರಾಷ್ಟ್ರಗಳು ಮನ್ನಣೆ ನೀಡಿರುವ, 1,114 ಮಿಲಿಯ ಮಹಾ ಜನತೆಯ ರಾಷ್ಟ್ರವನ್ನು ಒಂದು ರಾಷ್ಟ್ರವೆಂದು ಗುರುತಿಸದಿರುವ ಈ ನಾಟಕ ಬಹಳ ದಿನ ಇನ್ನು ನಡೆಯಲಾರದು. ಚೀನೀ ಜನತೆಯನ್ನೊಳಗೊಂಡು ಪ್ರಪಂಚದ ಶೇ. 64 ಜನ ಚೀನದ ವಿಷಯವನ್ನು ಇಂದು ಚರ್ಚಿಸಲು ಸಿದ್ಧರಿದ್ದಾರೆ. ಸಂ. ರಾ. ಸಂಸ್ಥೆಯಲ್ಲಿ ಅಮೆರಿಕೆ ಚೀನಾ ವಿಷಯದಲ್ಲಿ ಬೆಂಬಲ ಮೊದಲಿಗಿಂತ ಈಗ ಕಡಮೆಯಾಗಿದೆ. ಏಷ್ಯದ ಈ ಗೊತ್ತುವಳಿಗೆ 40ಕ್ಕೆದುರಾಗಿ ಎಂದಿಗಿಂತ ಹೆಚ್ಚು 29 ಓಟುಗಳು ಬಂದಿವೆ. 40ರಲ್ಲಿ 12 ರಾಷ್ಟ್ರಗಳು ಓಟು ಮಾಡದೆ ಹೊರಗುಳಿದಿವೆ. ಅಂದರೆ ಒಟ್ಟು 41 ರಾಷ್ಟ್ರಗಳ ಬೆಂಬಲ ಅಮೆರಿಕೆಗೆ ಇಲ್ಲವೆಂಬುದು ಸ್ಪಷ್ಟಪಟ್ಟಿದೆ.

ಹೀಗಿದ್ದರೂ ಅಮೆರಿಕೆಯ ಸಾಮ್ರಾಜ್ಯಶಾಹಿಗಳು ಚೀನಾ ಪರಿಸ್ಥಿತಿಯನ್ನು ಹೆಚ್ಚು ಹೆಚ್ಚು ಬಿಕ್ಕಟ್ಟಿಗೆ ತಂದು ಅದರ ಮೂಗನ್ನು ಕಟ್ಟಲು ಯತ್ನಿಸುತ್ತಿದ್ದಾರೆ. ಆದರೆ ಚೀನದ ಮೂಗನ್ನು ಬಿಗಿಯಲು ಅವರು ಪ್ರಯತ್ನಿಸಿದಷ್ಟು ತಮ್ಮ ಮೂಗನ್ನೇ ಕುಯ್ದುಕೊಳ್ಳುವಲ್ಲಿ ಮುಂದೊರೆಯುತ್ತಾರೆ.

ಕಾ॥ ಕೆ. ಅನಂದನ್ ನಂಬಿಯಾರರ ಮುಷ್ಕರ

ದಕ್ಷಿಣ ರೈಲ್ವೆ ಕೆಲಸಗಾರರ ಬೇಡಿಕೆಗಳನ್ನು ಪರಿಶೀಲಿಸಲು ಕೂಡ ತಿರಸ್ಕಾರವಿತ್ತ ದಕ್ಷಿಣ ರೈಲ್ವೆಯ ಮ್ಯಾನೇಜ್‌ಮೆಂಟ್ ನೀತಿಯನ್ನು ಪ್ರತಿಭಟಿಸಿ ಕಾ॥ ಕೆ. ಆನಂದನ್ ನಂಬಿಯಾರ್ ಅಕ್ಟೋಬರ್ ೨೧ರಿಂದ ಉಪವಾಸ ಮುಷ್ಕರ ಹೂಡಿದ್ದಾರೆ. ಈ ರೈಲ್ವೆಯ ಜನರಲ್ ಮ್ಯಾನೇಜರ್ ಮಹಾಶಯರು 16ನೇ ಭಾರತೀಯ ಕಾರ್ಮಿಕರ (ಎ ಐ.ಟಿ.ಯು.ಸಿ.) ಅಧಿವೇಶನ ಅಂಗೀಕರಿಸಿದ "ಕೋಡ್ ಆಫ್ ಡಿಸಿಪ್ಲಿನ್" ಕೂಡ ಗೊತ್ತಿಲ್ಲವೆಂದು ತಮ್ಮ ಅಜ್ಞಾನವನ್ನು ಪ್ರಕಟಪಡಿಸಿ ಎಲ್ಲರನ್ನೂ ಚಕಿತಗೊಳಿಸಿದ್ದಾರೆ.

ಈ ಕೋಡ್ ಪ್ರಕಾರ "ಕೆಲವೊಂದು ಸಂದರ್ಭಗಳಲ್ಲಿ ಮನ್ನಣೆ ಪಡೆಯದ ಕಾರ್ಮಿಕ ಸಂಘಗಳೊಡನೆ ಕೂಡ ಮಾಲೀಕವರ್ಗ ವಿಚಾರ ವಿನಿಮಯ ನಡೆಸಿ ಒಂದು ಒಪ್ಪಂದಕ್ಕೆ ಬರಬೇಕು" ಎಂದು ಹೇಳಿದೆ. ಭಾರತ ಸರ್ಕಾರವು ಕೂಡ ಇದಕ್ಕೆ ಶಿರಬಾಗಿದೆ. ಹೀಗಿದ್ದರೂ ಕೂಡ ದಕ್ಷಿಣ ರೈಲ್ವೆಯ ಮ್ಯಾನೇಜ್‌ಮೆಂಟ್‌ನವರು ಒಟ್ಟು 75 ಸಹಸ್ರ ದಕ್ಷಿಣ ರೈಲ್ವೆ ಕಾರ್ಮಿಕರಲ್ಲಿ 20 ಸಹಸ್ರ ಕಾರ್ಮಿಕರನ್ನು ಹೊಂದಿರುವ, ಅಲ್ಲದೆ ಮದ್ರಾಸು ಮತ್ತು ಕೇರಳಗಳಲ್ಲಿ ವಿಶೇಷ ಪ್ರಾತಿನಿಧ್ಯ ಹೊಂದಿರುವ ಸದರ್ನ್ ರೈಲ್ವೆ ಲೇಬರ್ ಯೂನಿಯನ್ನಿನ ಬೇಡಿಕೆಗಳ ನೀಡಿಕೆಯಿರಲಿ ಪರಿಶೀಲನೆಗೂ ಕಿವುಡರಾಗಿರುವುದನ್ನು ಕಂಡು ಕಾರ್ಮಿಕ ವಲಯಗಳಲ್ಲಿ ಕಾತುರಕ್ಕೆಡೆಗೊಟ್ಟಿದೆ. ಯೂನಿಯನ್ನಿನ ಪ್ರತಿನಿಧಿಯೊಂದಿಗೆ ವಿಚಾರವಿನಿಮಯ ನಡೆಸಿ ಆರ್ಥಿಕ ಸ್ಥಿತಿಯ ಸುಧಾರಣೆ ಮಾಡಬೇಕೆಂಬುದೇ ಈಗಿನ ಬೇಡಿಕೆಯಾಗಿದೆ

ಇಂದು ಸಹಸ್ರಾರು ಜನ ಕಾರ್ಮಿಕರು ನಂಬಿಯಾರರನ್ನು ನೋಡಲು ತೆರಳುತ್ತಿದ್ದಾರೆ. ಮದ್ರಾಸಿನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕೌನ್ಸಿಲ್ ಸಭೆಗೆ ಆಗಮಿಸಿರುವ ಕಮ್ಯೂನಿಸ್ಟ್ ಪಾರ್ಟಿ ನಾಯಕರು ಕೂಡ ಬಿಡುವು ಮಾಡಿಕೊಂಡು ನಂಬಿಯಾರರ ದೇಹಸ್ಥಿತಿಯನ್ನು ನೋಡಿಕೊಂಡು ಬರುತ್ತಿದ್ದಾರೆ.

ದಕ್ಷಿಣ ರೈಲ್ವೆಯವರ ಈ ನೀತಿ ಅತ್ಯಂತ ಖಂಡನೀಯವಾಗಿದ್ದು ಕಾರ್ಮಿಕರು ಒಳ್ಳೆಯ ಜೀವನಕ್ಕಾಗಿ ನಡೆಸುವ ಹೋರಾಟಗಳಿಗೆ ಮಾರಕವಾಗುವಂಥದಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು

ಗುಣಿ ಅಗ್ರಹಾರ ಜೋಡಿದಾರರ ದಬ್ಬಾಳಿಕೆ

ಹೆಸರುಗಟ್ಟ ಹೋಬಳಿ ಗುಣಿ ಅಗ್ರಹಾರ ಗೋಮಾಳದ ಜಮೀನು ನೂರಾರು ವರ್ಷಗಳಿಂದ ಗ್ರಾಮದ ರೈತರ ರಾಸುಗಳ ಮೇವಿಗಾಗಿ ಬಿಟ್ಟಿದ್ದನ್ನು ಜೋಡಿದಾರನು ಕೆಲವು ಜನ ಗೂಂಡಾಗಳ ಸಹಾಯ ತೆಗೆದುಕೊಂಡು ಗೋಮಾಳದ ಸುಮಾರು ನಲವತ್ತು ಎಕರೆಯನ್ನು ಟ್ರಾಕ್ಟರಿನಲ್ಲಿ ಉಳುಮೆ ಮಾಡಿಸಿ ಸ್ವಲ್ಪ ಭಾಗಕ್ಕೆ ಸರ್ವೆ ಸಸಿಯನ್ನು ಕಾಟಕ್ಕೆ ನೆಡುತ್ತಿದ್ದಂತಾ ಸಮಯಕ್ಕೆ ಗ್ರಾಮದ ರೈತರು ಈ ಅನ್ಯಾಯವನ್ನು ತಡೆಯಲು ಹೋದಾಗ್ಯೂ ಅವರುಗಳನ್ನು ಬಂದೂಕು ಮತ್ತು ಕೊಡಲಿ ಮುಂತಾದುವುಗಳಿಂದ ಸಜ್ಜಿತರಾಗಿದ್ದ ಜೋಡಿದಾರರ ಗುಂಪು ರೈತರನ್ನು ಬೆದರಿಸಿ ರೈತರನ್ನು ಗಾಬರಿಪಡಿಸಿರುವರು. ಬೆದರಿಕೆ ವಿಷಯವನ್ನು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ರೈತರು ರಕ್ಷಣೆಯ ಅರ್ಜಿಗಳನ್ನು ಕೊಟ್ಟಿರುತ್ತಾರೆ. ಅದೇ ಸಮಯಕ್ಕೆ ಜೋಡಿದಾರರ ರೈತರ ಮೇಲೆ ಸುಳ್ಳು ಆಪಾದನೆಯ ಕಂಪ್ಲೇಂಟನ್ನು ಪೋಲೀಸ್ ವ್ಯಾನ್ ಒಂದನ್ನು ಜತೆಯಲ್ಲಿಯೇ ಕರೆತಂದು ಗ್ರಾಮಕ್ಕೆ ಸುಮಾರು 2 ಮೈಲಿ ದೂರದಲ್ಲಿ ವ್ಯಾನನ್ನು ನಿಲ್ಲಿಸಿಕೊಂಡು ಗ್ರಾಮದ ರೈತರು ಬೆಂಗಳೂರಿನಿಂದ ಬರುತ್ತಿದ್ದಾಗ ಜೋಡಿದಾರನು, ಹೋಗುತ್ತಿದ್ದ ಕೆಲವು ರೈತರನ್ನು ಇವರೇ ಎಂದು ಪೋಲೀಸ್ ವ್ಯಾನಿನಲ್ಲಿ ಕುಳಿತಿದ್ದ ಹೆಡ್‌ಕಾನಿಸ್ಟೇಬಲ್‌ಗೆ ತೋರಿಸಿದ ತಕ್ಷಣ ವ್ಯಾನಿನಲ್ಲಿ ಲಕ್ಕಣ್ಣ ಮತ್ತು ಇಬ್ಬರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅವರನ್ನು ರಾತ್ರಿ ಹತ್ತು ಗಂಟೆಯ ವರೆವಿಗೆ ಸ್ಟೇಷನ್‌ನಲ್ಲಿ ಇಟ್ಟುಕೊಂಡಿದ್ದರು. ಮೂರನೇ ದಿನ ಪೋಲೀಸ್ ಅಧಿಕಾರಿಗಳನ್ನು ರೈತ ಸಂಘದ ಮುಖಂಡರಾದಂಥ ಬಿ. ಟಿ. ಸಿ. ರಾಜು ಮತ್ತು ಕಾರ್ಮಿಕ ಸಂಘದ ಮುಖಂಡರಾದಂಥ ಎಂ. ಎಸ್. ಕೃಷ್ಣನ್, ರಾಮರಾವ್‌ರವರು ಸಂಧಿಸಿ, ಜೋಡಿದಾರನ ಅನ್ಯಾಯವನ್ನು ವಿಶದೀಕರಿಸಿ ರೈತರಿಗೆ ನ್ಯಾಯ ದೊರಕಿಸಬೇಕೆಂದು ತಿಳಿಸಿದರು. ಸಂಬಂಧಪಟ್ಟ ತಹಸೀಲ್ದಾರ್‌ರವರನ್ನು ಬಿ. ಟಿ. ಸಿ. ರಾಜುರವರು ಸಂಧಿಸಿ ಗ್ರಾಮದ ರೈತರಿಗೆ ನ್ಯಾಯ ದೊರಕಿಸಿಕೊಡಲು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿ, ತಾನು ಸಹ ನ್ಯಾಯ ದೊರಕಿಸಿಕೊಡಲು ಸಿದ್ಧನಿರುತ್ತೇನೆಂದು ಹೇಳಿರುತ್ತಾರೆ.

ರೈತರ ಸಭೆ

ತಾ. 30-9-58ರ ಸಂಜೆ ಗುಣಿ ಅಗ್ರಹಾರದ ಗ್ರಾಮದಲ್ಲಿ, ಗ್ರಾಮದ ಪಂಚಾಯಿತಿ ಚೇರ್ಮನ್‌ರವರಾದಂಥ, ಕೆ. ಲಕ್ಷ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಸಿಂಗಾಪುರ, ಲಕ್ಷ್ಮೀಪುರ, ವಡೋರಹಳ್ಳಿ, ಕಾಳತಮ್ಮನಹಳ್ಳಿ, ವೀರಸಾಗರ ಮತ್ತು ಇನ್ನು ಕೆಲವು ಗ್ರಾಮಸ್ಥರು ಸುಮಾರು 400 ಮೇಲ್ಪಟ್ಟು ರೈತರು ಸಭೆಗೆ ಬಂದಿದ್ದರು. ದೊಡ್ಡಲಕ್ಕಪ್ಪ, ಕದಿರಪ್ಪ, ಸಿ. ಮುನಿಶಾಮಪ್ಪ, ಎಲ್. ಮುನಿಸಾಮಪ್ಪ, ರಂಗಪ್ಪ, ಲಕ್ಕಣ್ಣ — ಇವರುಗಳು ತಮ್ಮ ತಮ್ಮ ಗ್ರಾಮಗಳ ರೈತರ ಕುಂದುಕೊರತೆಗಳನ್ನು ವಿವರಿಸಿದರು. ಉತ್ತರ ತಾಲ್ಲೂಕು ರೈತ ಸಂಘದ ನಾಯಕರಾದ ಬಿ. ಟಿ. ರಾಜುರವರೂ ಮತ್ತು ತಿರುಮಳಪ್ಪನವರಿಗೂ ರೈತ ಸಂಘದ ಬಗ್ಗೆ ಮಾತನಾಡಿದರು.

ಮಂಗಳೂರು—

ಗೇರುಬೀಜ ಕೆಲಸಗಾರ ಸಂಘದ ಕಾರ್ಯಕಾರಿ ಸಮಿತಿ ಸಭೆ

ಗೇರುಬೀಜ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ತಾ. 6—10—58ರಂದು ಸೇರಿ ಕಳೆದ ತಿಂಗಳ ತಾ. 17ರಂದು ಮುಖ್ಯ ಮಂತ್ರಿಯವರೊಡನೆ ಸಂಘದ ಅಧ್ಯಕ್ಷರು ಭೇಟಿ ಮಾಡಿ ನಡೆಸಿದ ವಿಚಾರ ವಿನಿಮಯಗಳ ಕುರಿತು ವಿವರವನ್ನು ಪರಿಶೀಲಿಸಿ ತಾ. 19ರಂದು ಲೇಬರ್ ಕಮಿಶನರರ ಸಮಕ್ಷಮ ಮಂಗಳೂರಿನಲ್ಲಿ ನಡೆದ ವಿಚಾರಣೆಯಲ್ಲಿ ಸಂಘದ ಧೋರಣೆಯನ್ನು ಸಭೆಗೆ ತಿಳಿಸಿ ಲೇಬರ್ ಕಮಿಶನರರು ತಮ್ಮ ವರದಿಯನ್ನು ಸರಕಾರಕ್ಕೆ ಕೂಡಲೇ ಒಪ್ಪಿಸಬೇಕೆಂದು ಕೇಳಿಕೊಳ್ಳಲಾಯ್ತು.

ಮಿಜಾರ್ ಗೋವಿಂದ ಪೈ ಮತ್ತು ಯು. ನಾರಾಯಣ ಮಲ್ಯರ ಕಾರ್ಖಾನೆಗಳನ್ನು ಈ ತಿಂಗಳ ಅಖೈರಿಗೆ ಮುಚ್ಚುವುದಾಗಿ ಹಾಕಿದ ನೋಟೀಸುಗಳನ್ನು ಖಂಡಿಸಲಾಯಿತಲ್ಲದೆ, ಅಕಾಲಿಕವಾಗಿ ಈ ರೀತಿಯಲ್ಲಿ ಕಾರ್ಖಾನೆಗಳನ್ನು ಮುಚ್ಚಿದರೆ ಸುಮಾರು 2,000 ಮಜೂರರಿಗೆ ನಿರುದ್ಯೋಗದ ಭೀತಿಯನ್ನು ತಪ್ಪಿಸಲು ಸರಕಾರವು ಕೂಡಲೇ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದೂ, ಕಾರ್ಖಾನೆಗಳನ್ನು ಮುಚ್ಚುವುದರ ವಿರುದ್ಧವಾಗಿ ಚಳವಳ ಹೂಡಲು ತೀರ್ಮಾನಿಸಲಾಯಿತು.

ಕಳೆದ ಒಂದು ತಿಂಗಳಿಂದ ಮುಷ್ಕರ ಹೂಡುತ್ತಿರುವ ಹಟ್ಟಿ ಚಿನ್ನದ ಗಣಿಯ ಮಜೂರರಿಗೆ ಸಹಾನುಭೂತಿ ತೋರಿಸಿ, ಮಜೂರರ ಕೇಳಿಕೆಗಳನ್ನು ಕೂಡಲೇ ನೆರವೇರಿಸಬೇಕೆಂದು ಮೈಸೂರು ಸರಕಾರವನ್ನು ಒತ್ತಾಯಿಸಲಾಯಿತು.

ರೈಲ್ವೆ ಮಜೂರರ ಕೇಳಿಕೆಗಳಿಗಾಗಿ ಶ್ರೀ ಆನಂದನ್ ನಂಬಿಯಾರರು ತಾ. ೨೧ರಿಂದ ನಡೆಸುತ್ತಿರುವ ಅನ್ನ ಸತ್ಯಾಗ್ರಹಕ್ಕೆ ಸಹಾನುಭೂತಿ ತೋರಿಸಿ, ರೈಲ್ವೆ ಮಜೂರರ ಕೇಳಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಕೇಂದ್ರದ ರೈಲ್ವೆ ಮಜೂರ ಮಂತ್ರಿಯನ್ನು ವಿನಂತಿಸಲಾಯಿತು.

ಗೇರುಬೀಜ ಕೈಗಾರಿಕೆಯಲ್ಲಿ ಉದ್ಭವಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಯಕ್ರಮವನ್ನು ಸಿದ್ಧಗೊಳಿಸಲು ನವೆಂಬರ್ 23ನೇ ತಾರೀಕಿನಂದು ಸಮ್ಮೇಳನ ನಡೆಸಲು ನಿರ್ಣಯಿಸಲಾಯ್ತು. ಇನ್ನು ಹಲವಾರು ತೀರ್ಮಾನಗಳಾದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯ್ತು.

ಸರ್ವಪಕ್ಷ ಸಮ್ಮೇಳನ ಕೂಡಲೇ ನಡೆಯಲಿ

(ಮೊದಲನೇ ಪುಟದಿಂದ)

ಹ ನೀಡಿದಂತಾಗಿದೆ. ಜಮಿನಾನು ಹಂಚು ವಿಕೆಯು ಜನರ ಯೋಗ್ಯತೆ ಮತ್ತವರ ಆರ್ಥಿಕ ಮಟ್ಟಗಳ ಆಧಾರದ ಮೇಲೆ ಆಗಬೇಕೇ ಹೊರತು ರಾಜಕೀಯ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಕಮ್ಯೂನಿಸ್ಟ್ ಪಾರ್ಟಿಯು ಒತ್ತಾಯಪಡಿಸುತ್ತದೆ.

ಸರಕಾರ ಕೂಡಲೇ ಒಂದು ಸಮಗ್ರ ಮತ್ತು ಯೋಗ್ಯ ಭೂಸುಧಾರಣಾ ಶಾಸನವನ್ನೂ ಜಾರಿಗೆ ತರಬೇಕೆಂದು ಸಮಿತಿ ಒತ್ತಾಯಪಡಿಸುತ್ತದೆ.

ಇನಾಂ ರದ್ದಿಯಾತಿ

ಇದೇ ಅಕ್ಟೋಬರ್ 2ರಂದು ರಾಜ್ಯದ ಎಲ್ಲ ಇನಾಂ ಗ್ರಾಮಗಳನ್ನೂ ಸರಕಾರ ವಶಪಡಿಸಿಕೊಳ್ಳುವುದಾಗಿ ವ್ಯವಸಾಯ ಮಂತ್ರಿಯವರು ಕೊಟ್ಟಿದ್ದ ಭರವಸೆಯನ್ನು ಅವರು ಮುರಿದಿರುವುದು ವಿಷಾದಕರವಾಗಿದೆ. ಆ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಕಾರಣಗಳು ತೀರಾ ಅಸಮರ್ಪಕವಾಗಿದೆಂದು ಕಮ್ಯೂನಿಸ್ಟ್ ಪಾರ್ಟಿ ಅಭಿಪ್ರಾಯಪಡುತ್ತದೆ. ಮನಸ್ಸಿದ್ದರೆ ಯೋಗ್ಯ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಸಾಧ್ಯವಿತ್ತು. ಶಾಸನ ಸಭೆಯ ವಿಶೇಷ ಅಧಿವೇಶನವನ್ನು ಸೇರಿಸಬಹುದಿತ್ತು. ಅಥವಾ "ಆರ್ಡಿನೆನ್ಸ್"ದರೂ ಹೊರಡಿಸಬಹುದಾಗಿತ್ತು. ಈ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇನಾಂ ಪದ್ಧತಿಯನ್ನು ಮುಂದುವರಿಸಿರುವುದು ಶೋಚನೀಯವಾಗಿದೆ. ಇನಾಂ ರದ್ದು ಮಾಡುವ ಶಾಸನ ಬಂದು ನಾಲ್ಕು ವರ್ಷ ಕಳೆದರೂ ಅದನ್ನು ಸಂಪೂರ್ಣವಾಗಿ ಜಾರಿಗೆ ತರಲು ವಿಳಂಬ ಮಾಡಿರುವುದರಿಂದ ಇನಾಂದಾರರು ಅಕ್ರಮಗಳನ್ನು ನಡೆಸಿ ಇನಾಂ ಗ್ರಾಮಗಳ ರೈತರಿಗೆ ಹಲವು ರೀತಿಗಳಲ್ಲಿ ಅನ್ಯಾಯ, ಮೋಸ ಮತ್ತು ವಂಚನೆಗಳನ್ನು ನಡೆಸಲು ಸಹಾಯಕವಾಗಿದೆ.

ಹಿಂದಿನ ಪಾಳೆಯಗಾರಿ ಪದ್ಧತಿಯ ಅವಶೇಷವಾದ ಇನಾಂ ಪದ್ಧತಿಯನ್ನು ಕೂಡಲೇ ಕೊನೆಗೊಳಿಸಲು ಸರಕಾರ ತುರ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ಒತ್ತಾಯಪಡಿಸುತ್ತದೆ.

ಶರಾವತಿ ಯೋಜನೆ

ನಮ್ಮ ಪ್ರಾಂತದ ಅಭಿವೃದ್ಧಿಗೆ ಅತ್ಯವಶ್ಯಕವಾಗಿರುವ ಶರಾವತಿ ವಿದ್ಯುದಾಗರ ಯೋಜನೆಯನ್ನು ದ್ವಿತೀಯ ಪಂಚ ವಾರ್ಷಿಕ ಯೋಜನೆಯ "ಕೋರ್"ನಲ್ಲಿ ಸೇರಿಸದಿರುವುದು ಶೋಚನೀಯವಾಗಿದೆ. ಶರಾವತಿ ಯೋಜನೆಯಿಂದ ಸುಮಾರು 7 ಲಕ್ಷ ಕಿಲೋವಾಟ್ ವಿದ್ಯುತ್ ಶಕ್ತಿ ತಯಾರಾಗಲಿದೆ. ಈಗ ಇಡೀ ಭಾರತದಲ್ಲಿ ಉತ್ಪಾದಿತವಾಗುವ ಜಲಜನ್ಯ ವಿದ್ಯುತ್ತು ಸುಮಾರು 10 ಲಕ್ಷ ಕಿಲೋವಾಟ್‌ಗಳಷ್ಟಿರುವಾಗ ಈ ಯೋಜನೆಯ ಮಹತ್ವ ಸ್ಪಷ್ಟವಾಗುವುದು, ನಮ್ಮ ನಾಡಿನ ನದಿಗಳ ಪ್ರವಾಹದಿಂದ ಸುಮಾರು 30 ಲಕ್ಷ ಕಿಲೋವಾಟು ಶಕ್ತಿಯನ್ನು ನಿರ್ಮಿಸಿಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಅದರಲ್ಲಿ 7 ಲಕ್ಷ ಕಿಲೋವಾಟು ತಯಾರಾಗುವ ಶರಾವತಿ ಯೋಜನೆಯೇ ಅತಿಮುಖ್ಯವಾದದ್ದು. ಈ ಯೋಜನೆ ಕಾರ್ಯಗತವಾದರೆ ನಮ್ಮ ರಾಜ್ಯದ ಅವಶ್ಯತೆಯನ್ನು ಪೂರೈಸಬಹುದಾಗಿದೆ.

ನೂತನ ಪ್ರಾಂತ ರಚನೆಯಾದಂದಿನಿಂದ ವಿದ್ಯುತ್ ಶಕ್ತಿಯ ಅಭಾವ ಎಲ್ಲ ಕ್ಷೇತ್ರಗಳಲ್ಲೂ ಕಂಡುಬಂದಿದೆ. ಇದರಿಂದ ನಮ್ಮ ಪ್ರಗತಿಗೆ ಅಡ್ಡಿಯಾಗಿದೆ.

ಶರಾವತಿ ಯೋಜನೆಗೆ ಸುಮಾರು 50 ಕೋಟಿ ರೂಪಾಯಿ ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರಿಂದ ಬರೀ 3/4 ನಯೇ ಪೈಸಾದ ವೆಚ್ಚದಲ್ಲಿ ಒಂದು ಯೂನಿಟ್ ವಿದ್ಯುಚ್ಛಕ್ತಿ ನಮಗೆ ದೊರೆಯುವುದು.

ಅಗಾಧ ಪ್ರಮಾಣದಲ್ಲೂ, ಇಷ್ಟು ಕಡಿಮೆ ಖರ್ಚಿನಲ್ಲೂ ನಮ್ಮ ಪ್ರಗತಿಗೆ ಅತ್ಯವಶ್ಯಕವಾಗಿಯೂ ಇರುವ ಈ ಯೋಜನೆಗೆ ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ಅಗ್ರಸ್ಥಾನ ದೊರೆಯದಿದ್ದುದು ವಿಷಾದಕರವಾಗಿದೆ. ಕೇಂದ್ರ ಸರಕಾರದ ಮಲತಾಯಿ ಧೋರಣೆಯೂ, ಮೈಸೂರು ಸರಕಾರದ ಅಸಡ್ಡೆ ನೀತಿಯೂ ಇದಕ್ಕೆ ಕಾರಣವೆಂದು ಪ್ರಾಂತ ಸಮಿತಿಯ ಅಭಿಪ್ರಾಯವಾಗಿದೆ. ಈಗಲಾದರೂ ಈ ಯೋಜನೆಯನ್ನು ದ್ವಿತೀಯ ಯೋಜನೆಯಲ್ಲಿ ಸೇರಿಸಿ ಅದನ್ನು ಕಾರ್ಯಗತಗೊಳಿಸಲು ಕೇಂದ್ರ ಸರಕಾರ ಹಣ ಒದಗಿಸುವಂತೆ ಮೈಸೂರು ಸರಕಾರವೂ ಎಲ್ಲ ಪಕ್ಷಗಳೂ ಒತ್ತಾಯಪಡಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯು ವಿನಂತಿಸುತ್ತದೆ.

ಪಾರ್ಟಿಯ ಚಂದಾ ಹಣ

ಪಾರ್ಟಿಯ ಹೊಸ ಘಟನೆಯಂತೆ ಪಾರ್ಟಿ ಸದಸ್ಯರು ಒಂದು ರೂಪಾಯಿ ವಾರ್ಷಿಕ ಚಂದಾ ಕೊಡಬೇಕಾಗಿದೆ. ಹಳೆ ಸದಸ್ಯರಿಂದ 1957ರ ಕೊನೆ ತನಕ ಚಂದಾ ವಸೂಲಾಗಿರುತ್ತದೆ. ಈ ವರ್ಷದ ಚಂದಾ ಹಣ ವಸೂಲಾಗಬೇಕಾಗಿದೆ. ಎಲ್ಲ ಪಾರ್ಟಿ ಸದಸ್ಯರೂ 1958ರ ಚಂದಾವನ್ನು ಕೂಡಲೇ ಕೊಡಬೇಕಾಗಿ ಪ್ರಾಂತ ಸಮಿತಿ ತೀರ್ಮಾನಿಸುತ್ತದೆ ಹೊಸದಾಗಿ ಪಾರ್ಟಿಗೆ ಸೇರಿದವರಿಂದ ಚಂದಾ ವಸೂಲಾಗಿರಬಹುದು. ಅವರ ಪೈಕಿ ಯಾರಾದರೂ ಕೊಡದವರಿದ್ದರೆ ಅವರಿಂದಲೂ ವಸೂಲು ಮಾಡಬೇಕು. ಇದರ ಬಗ್ಗೆ ಜಿಲ್ಲಾ ಸಮಿತಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾಂತ ಸಮಿತಿ ತೀರ್ಮಾನಿಸುತ್ತದೆ.

ಪ್ರಾಂತ ಸಮ್ಮೇಳನ

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಅಮೃತಸರ ಅಧಿವೇಶನದ ನಂತರ ನಮ್ಮ ಪ್ರಾಂತದ ಪಾರ್ಟಿ ಸಮ್ಮೇಳನವನ್ನು ನಡಿಸಿ ಹೊಸ ಘಟನೆಗಳಿಗನುಗುಣವಾಗಿ ಪಾರ್ಟಿಯ ಅಂಗಗಳನ್ನು ಚುನಾಯಿಸಬೇಕೆಂದು ಕಳೆದ ಪ್ರಾಂತ ಸಮ್ಮೇಳನದಲ್ಲಿ ತೀರ್ಮಾನವಾಗಿತ್ತು. ಅದರಂತೆ ಪ್ರಾಂತದ ಪಾರ್ಟಿ ಸಮ್ಮೇಳನವನ್ನು ಡಿಸೆಂಬರ್ 4ರಿಂದ 7ರ ತನಕ ನಡೆಸಬೇಕೆಂದು ಸಮಿತಿ ತೀರ್ಮಾನಿಸಿದೆ. ಸಮ್ಮೇಳನಕ್ಕೆ 30 ಸದಸ್ಯರಿಗೊಂದು ಪ್ರತಿನಿಧಿಯಂತೆ ಪ್ರತಿನಿಧಿಗಳನ್ನು ಜಿಲ್ಲಾ ಸಮ್ಮೇಳನಗಳಲ್ಲಿ ಆರಿಸಿ ಕಳಿಸಬೇಕೆಂದು ನಿರ್ಧರಿಸಲಾಗಿದೆ. ಪ್ರತಿಯೊಂದು ಘಟಕಕ್ಕೂ ಕನಿಷ್ಠ ಇಬ್ಬರು ಪ್ರತಿನಿಧಿಗಳನ್ನು ಆರಿಸಿ ಕಳಿಸಲು ಅವಕಾಶ ಕೊಡಲಾಗಿದೆ.

ಪ್ರಾಂತ ಸಮ್ಮೇಳನ ಮೊದಲು ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಸಮ್ಮೇಳನಗಳು ನಡೆದು ಪ್ರತಿನಿಧಿಗಳನ್ನು ಆರಿಸಬೇಕೆಂದೂ ಸಮಿತಿಯ ತೀರ್ಮಾನವಾಗಿದೆ. ಈ ಸಮ್ಮೇಳನವನ್ನು ಯಶಸ್ವಿಗೊಳಿಸಲು ಎಲ್ಲ ಪಾರ್ಟಿ ಘಟಕಗಳೂ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

(ಸಮ್ಮೇಳನ ನಡೆಯುವ ಸ್ಥಳ ಮತ್ತಿತರ ವಿವರಗಳನ್ನು ಮುಂದೆ ತಿಳಿಸಲಾಗುವುದು.)

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810